ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

SP NEWS ಡಿಜಿಟಲ್ ನ್ಯೂಸ್ ಚಾನಲ್

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue: 175 ಸಂಚಿಕೆ: 175 | Date: 02-08-2026 Sunday | RNI NO: KARKAN/2021/80805 | L2/RNP-1285/TMR/2025-27 | Page: 4 ಪುಟ: 4 | Price: 1.00 ಬೆಲೆ: 1.00 ರೂ

ಆತ್ಮನಿರ್ಭರ, ಮೇಕ್ ಇನ್ ಇಂಡಿಯ ಸಾಧನೆಯಲ್ಲೂ ಯುವಜನರ ಕೊಡುಗೆ ದೊಡ್ಡದು; ಮೋದಿ



ಮೈಸೂರು ಪ್ರಮುಖ ಸಾಂಸ್ಕೃತಿಕ ಕೇಂದ್ರ ಎಂದು ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜೀ ಅವರು ತಿಳಿಸಿದರು. ವಿವೇಕ ಸ್ಮಾರಕವು ಸಾಧಕರು ಮತ್ತು ಶ್ರದ್ಧಾಳುಗಳ ಕೇಂದ್ರ ಆಗಲಿ ಎಂದು ಆಶಿಸಿದರು.

ಶ್ರೀ ರಾಮಕೃಷ್ಣ ಮಠದಿಂದ ನಿರ್ಮಿಸಿದ ವಿವೇಕ ಸ್ಮಾರಕವನ್ನು ಇಂದು ಉದ್ಘಾಟಿಸಿದ ಬಳಿಕ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಸ್ವಾಮೀಜಿಗಳು ಸಂತರು, ಗುರುಬಂಧುಗಳನ್ನು ಭೇಟಿ ಮಾಡುವ ಅವಕಾಶ ಮತ್ತೆ ನನಗಿಂದು ಲಭಿಸಿದೆ ಎಂದು ತಿಳಿಸಿದರು.

ದಸರಾ, ಸಂಗೀತ–ಸಾಹಿತ್ಯ ಸೇರಿ ಅನೇಕ ಪ್ರಮುಖ ಕ್ಷೇತ್ರಗಳಲ್ಲಿ ಕೊಡುಗೆಗಳನ್ನು ಈ ನಗರ ನೀಡಿದೆ ಎಂದು ತಿಳಿಸಿದರು. ರಾಮಕೃಷ್ಣ ಆಶ್ರಮವೂ ಇಲ್ಲಿನ ಸಮೃದ್ಧತೆಯ ಭಾಗ ಎಂದು ಮೆಚ್ಚುಗೆ ಸೂಚಿಸಿದರು. ರಾಷ್ಟ್ರಕವಿ ಕುವೆಂಪು ಅವರು ಮೈಸೂರಿನಲ್ಲಿದ್ದಾಗ ಅವರು ಈ ಆಶ್ರಮದಲ್ಲಿದ್ದರು ಎಂದು ನೆನಪಿಸಿದರು.

ಭಾರತವು ಸ್ಟಾರ್ಟಪ್ ಕ್ಷೇತ್ರದಲ್ಲೂ ಪ್ರಮುಖ ಸ್ಥಾನ ಪಡೆದಿದೆ. ಮೊಬೈಲ್ ಫೋನ್ ನಿರ್ಮಾಣದಲ್ಲೂ ಅದು ದೊಡ್ಡ ಸಾಧನೆ ಮಾಡಿದೆ. ಡಿಜಿಟಲ್ ಸೊಲ್ಯೂಷನ್ ವಿಚಾರದಲ್ಲೂ ಅದು ಸಾಧಕ ದೇಶವಾಗಿದೆ. ಸೆಮಿ ಕಂಡಕ್ಟರ್ ಕ್ಷೇತ್ರದಲ್ಲೂ ಅದು ಸಾಧನೆ ಮಾಡುತ್ತಿದೆ. ಇದೆಲ್ಲದಕ್ಕೂ ಯುವಜನರೇ ಕಾರಣ ಎಂದು ಶ್ಲಾಘಿಸಿದರು. ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯ ಸಾಧನೆಯಲ್ಲೂ ಭಾರತದ ಯುವಜನರ ಕೊಡುಗೆ ದೊಡ್ಡದು ಎಂದರು.

ವಿದ್ಯಾರ್ಥಿಗಳು, ಯುವಜನರ ಹರ್ಷೋದ್ಗಾರಗಳ ನಡುವೆ ಮಾತನಾಡಿದ ಅವರು, ಎಲ್ಲರಿಗೂ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲೇ ತಿಳಿಸಿದರು. ಚಾಮುಂಡೇಶ್ವರಿ ದೇವಿಗೆ ಪ್ರಣಾಮ ಸಲ್ಲಿಸಿ ಭಾಷಣ ಆರಂಭಿಸಿದರು. ನನ್ನ ಸಾಧನೆಯಲ್ಲಿ ರಾಮಕೃಷ್ಣ ಮಿಷನ್ ಕೊಡುಗೆ ದೊಡ್ಡದು ಎಂದರು. ಯುವ ಜನರಿಗೆ ಸರಿಯಾದ ದಾರಿ ತೋರಿಸುವಲ್ಲಿ ಶಿಕ್ಷಣ ಸಂಸ್ಥೆಗಳ ಕೊಡುಗೆ ಪ್ರಮುಖವಾದುದು ಎಂದ ಅವರು, ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಸರಕಾರ ನೀಡಿದ ಕೊಡುಗೆಯನ್ನು ಉಲ್ಲೇಖಿಸಿದರು. ಶಿಕ್ಷಣ ಕ್ಷೇತ್ರದ ಮೂಲಸೌಕರ್ಯವನ್ನು ಆಧುನೀಕರಣ ಮಾಡಲಾಗುತ್ತಿದೆ ಎಂದು ವಿವರಿಸಿದರು. ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಸ್ಥಾಪನೆಯ ಮಾಹಿತಿ ಕೊಟ್ಟರು. ಮಾತೃಭಾಷೆಯಲ್ಲೇ ಮೆಡಿಕಲ್–ಎಂಜಿನಿಯರಿಂಗ್ ಶಿಕ್ಷಣ ಕೊಡಲಾಗುತ್ತಿದೆ. ಕ್ರೀಡಾ ಕ್ಷೇತ್ರಕ್ಕೂ ಉತ್ತೇಜನ ಕೊಡಲಾಗಿದೆ ಎಂದ ಅವರು, ಖೇಲೋ ಇಂಡಿಯ ಮೂಲಕ ಯುವಜನರಿಗೆ ವೇದಿಕೆ ಕಲ್ಪಿಸಿದ್ದನ್ನು ವಿವರಿಸಿದರು. ರಾಜ್ಯವು ಕನ್ನಡ ಭಾಷೆಯಲ್ಲಿ ಮಹಾನ್ ಲೇಖಕರ ಮತ್ತು ಸಾಹಿತಿಗಳನ್ನು ನೀಡಿದೆ ಎಂದರು.

ಪ್ರಧಾನಿಯವರು ವಿದ್ಯಾರ್ಥಿಗಳತ್ತ ಕೈಬೀಸಿದಾಗ 'ಮೋದಿ, ಮೋದಿ' ಎಂದು ಉದ್ಘಾರ ಕೇಳಿಸಿತು. ಶ್ರೀ ರಾಮಕೃಷ್ಣ ಮಠ ಆಶ್ರಮದ ಸ್ವಾಮೀಜಿಗಳು ಯುವಜನತೆಗೆ ಸಂದೇಶ ನೀಡಿದರು. ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದರ ಜೀವನ– ಸಂದೇಶಗಳ ಕುರಿತು ಮಾತನಾಡಿದರು. ಆಶ್ರಮದ ಕುರಿತ ಕಿರುಚಿತ್ರವನ್ನೂ ಪ್ರದರ್ಶನ ಮಾಡಲಾಯಿತು. ಇದಕ್ಕೂ ಮೊದಲು ಅವರು ಬಳಿಕ ಸ್ವಾಮಿ ವಿವೇಕಾನಂದರ ಪುತ್ಥಳಿಗೆ ನಮಿಸಿದರು. ಕೆಲಕ್ಷಣ ಧ್ಯಾನ ಮಾಡಿದರು. ದೇವರಿಗೆ ಪೂಜೆ ಸಲ್ಲಿಸಿ ನಮಿಸಿದರು. ವಿವೇಕ ಸ್ಮಾರಕದಲ್ಲಿನ ಸೌಲಭ್ಯಗಳನ್ನು ವೀಕ್ಷಿಸಿದರು. ಆಶ್ರಮದ ಆವರಣದಲ್ಲಿ ಸಸಿಯೊಂದನ್ನು ನೆಟ್ಟು ನೀರೆರೆದರು.

ಮಾನ್ಯ ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋತ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಮುಖರು, ಶಾಸಕರು, ಸ್ಥಳೀಯ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಭಿವೃದ್ಧಿಗೆ ಕೈಜೋಡಿಸಿ ಕರ್ನಾಟಕವನ್ನು ರಕ್ಷಿಸಿ: ಪ್ರಧಾನಿ ನರೇಂದ್ರ ಮೋದಿಗೆ ಡಿಕೆಶಿ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ



ದೇಶದ ಬೆಳವಣಿಗೆಯು ರಾಜ್ಯದ ಪ್ರಗತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ಪ್ರತಿಪಾದಿಸಿದ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಶಯದಡಿ ಹೆಚ್ಚಿನ ಸಹಕಾರವನ್ನು ಕೋರುವ ಮೂಲಕ ರಾಜ್ಯಕ್ಕೆ ಬೆಂಬಲ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಇಲ್ಲಿ ಪ್ರಧಾನಿಯವರ ಸಮ್ಮುಖದಲ್ಲಿ 'ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ'ದ ಉದ್ಘಾಟನೆಯ ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಶಿವಕುಮಾರ್, ದೇಶದ ನಾಯಕರಾದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೇ ಎಂದರು ಕರ್ನಾಟಕ ಮತ್ತು ಬೆಂಗಳೂರು ಜಗತ್ತಿಗೆ ಭಾರತದ ಕಿಟಕಿಯಾಗಿ ಹೊರಹೊಮ್ಮಿವೆ ಎಂದು ಬಣ್ಣಿಸಿದರು. ಇದೇ ವೇಳೆ ರಾಜ್ಯದ ಅಭಿವೃದ್ಧಿಗೆ ಕೇಂದ್ರದ ಬೆಂಬಲವನ್ನು ಕೋರಿದ್ದಾರೆ. ನಮ್ಮ ಪ್ರಧಾನಿಯವರು ಇಲ್ಲಿದ್ದಾರೆ. ಕರ್ನಾಟಕ ಮತ್ತು ಬೆಂಗಳೂರಿನ ಮೂಲಕವೇ ಇಡೀ ಜಗತ್ತು ಭಾರತವನ್ನು ನೋಡುತ್ತಿದೆ. ಹೀಗಾಗಿ, ಕರ್ನಾಟಕಕ್ಕೆ ಸಹಾಯ ಮಾಡುವಲ್ಲಿ ಹಾಗೂ ರಾಜ್ಯವನ್ನು ಉಳಿಸುವಲ್ಲಿ ಉದಾರ ಮನೋಭಾವ ತೋರುವಂತೆ ನಾನು ಕರ್ನಾಟಕ ಸರ್ಕಾರ ಮತ್ತು ರಾಜ್ಯದ ಸಮಸ್ತ ಜನರ ಪರವಾಗಿ ಅವರನ್ನು ಕೋರುತ್ತೇನೆ. ಭಾರತವು ಕರ್ನಾಟಕದೊಂದಿಗೆ ಬೆಳೆಯಬೇಕು. ಇದಕ್ಕಾಗಿ ಸಹಕಾರ ನೀಡಬೇಕು. ಅಭಿವೃದ್ಧಿಗೆ ಕೈಜೋಡಿಸಿ ಕರ್ನಾಟಕವನ್ನು ರಕ್ಷಿಸಿ ಎಂದು ಮನವಿ ಮಾಡಿದ್ದಾರೆ.

ಈ ಉದ್ಘಾಟನಾ ಸಮಾರಂಭವನ್ನು 'ದೇಶದ ಯುವ ಚಳುವಳಿಯ ಪಾಲಿನ ಒಂದು ಐತಿಹಾಸಿಕ ಘಟನೆ' ಎಂದು ಬಣ್ಣಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಸೋಲಾದಾಗ ವಿಶಾಲ ಹೃದಯದವರಾಗಿರಿ, ಗೆದ್ದಾಗ ಉದಾರ ಹೃದಯದವರಾಗಿ' ಎನ್ನುವ ಸ್ವಾಮಿ ವಿವೇಕಾನಂದರ ಮಾತುಗಳನ್ನು ಸ್ಮರಿಸಿದ್ದಾರೆ.

ಇದೊಂದು ಐತಿಹಾಸಿಕ ಕಾರ್ಯಕ್ರಮ. ಯುವಶಕ್ತಿ, ಯುವ ಆಲೋಚನೆ ಹಾಗೂ ಯುವಚಿಂತನೆ ವಿವೇಕಾನಂದರ ಚಿಂತನೆ. ಅದನ್ನು ಅಳವಡಿಸಿಕೊಳ್ಳಲು ಚಿಕ್ಕಂದಿನಿಂದಲೂ ಪ್ರಯತ್ನಿಸುತ್ತಿದ್ದೇನೆ. ಎಂದು ಹೇಳಿದರು ಎಂದಿದ್ದಾರೆ.

ಯುವ ಸಮುದಾಯ ವ್ಯಸನಗಳಿಗೆ ಬಲಿಯಾಗಿ ಮಾನವೀಯತೆ ಕಳೆದುಕೊಳ್ಳುತ್ತಿದ್ದಾರೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಸತ್ಯದ ಆಚರಣೆ ದೂರವಾಗಿ ಯುವ ಸಮುದಾಯ ವ್ಯಸನಗಳಿಗೆ ಬಲಿಯಾಗಿ ಮಾನವೀಯತೆ ಕಳೆದುಕೊಳ್ಳುತ್ತಿದ್ದಾರೆ ಎಂದು ಶ್ರೀ ಸಿದ್ದರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಶ್ರೀ ಮ.ನಿ.ಪ್ರ ಡಾ: ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಪೊಲೀಸ್ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲ್ಲೂಕು ಆಡಳಿತ ಹಾಗೂ ಡಾ: ಬಿ.ಆರ್. ಅಂಬೇಡ್ಕರ್ ಯುವಜನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ಶನಿವಾರ ನಗರದ ತುಮಕೂರು ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ "ಜಿಲ್ಲಾ ಮಟ್ಟದ ವ್ಯಸನ ಮುಕ್ತ ದಿನಾಚರಣೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ದುಷ್ಚಟಗಳ ದಾಸರಾಗುತ್ತಿರುವ ಯುವ ಜನರು ತಮ್ಮ ವಿಷಯುಕ್ತ ವ್ಯಸನಗಳಿಂದ ಕುಟುಂಬವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ತಂದೆ–ತಾಯಿ, ಗುರು–ಹಿರಿಯರಿಗೂ ಗೌರವ ಕೊಡದಂತಹ ದುಷ್ಟರಾಗಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ಚಿತ್ತರಗಿಯ ಲಿಂಗೈಕ್ಯ ಡಾ: ಮಹಾಂತ ಶಿವಯೋಗಿಗಳು ಇಂತಹ ವ್ಯಸನಗಳನ್ನು ದೂರ ಮಾಡಲು ಊರೂರು ತಿರುಗಿ ಜೋಳಿಗೆಯಲ್ಲಿ ಚಟಗಳನ್ನು ಭಿಕ್ಷೆ ಬೇಡಿ ಹಲವಾರು ಕುಟುಂಬಗಳನ್ನು ಉಳಿಸಿದ್ದಾರೆ. ಹಲವು ಭಕ್ತರ ಸನ್ನಡತೆಗೆ ಕಾರಣರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಯುವ ಸಮುದಾಯ ವ್ಯಸನಗಳಿಂದ ಮುಕ್ತರಾಗಿ ತಮ್ಮ ಮನಸ್ಸು, ದೇಹಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಬೇಕು. ಈ ಮೂಲಕ ಸಮಾಜದಲ್ಲಿ ಸದ್ಗೃಹಿಗಳಾಗಿ ಬದುಕಬೇಕು ಎಂದು ಕರೆ ನೀಡಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ. ಅಶೋಕ್ ಮಾತನಾಡಿ, ಬಹುಕಾಲದಿಂದಲೂ ತಲೆಮಾರುಗಳ ಅಂತರದಲ್ಲಿ ಸಾಕಷ್ಟು ವ್ಯಸನಮುಕ್ತ ಬೆಳವಣಿಗೆಗಳು ನಡೆದಿವೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಹೊಸ ತಲೆಮಾರಿನ ಯುವ ಸಮುದಾಯ ಮಾದಕ ವಸ್ತುಗಳು ತಮಗೆ ಸ್ಫೂರ್ತಿ ಎಂದು ತಪ್ಪಾಗಿ ತಿಳಿದಿದ್ದಾರೆ. ಆದರೆ ಇದರಿಂದ ತಮ್ಮ ದೇಹ ಮತ್ತು ತಮ್ಮ ಪರಿಸರ ಹಾಳಾಗುವುದನ್ನು ಗಮನಿಸುತ್ತಿಲ್ಲ. ಇದರ ಪರಿಣಾಮ ಸಮಾಜದ ಮೇಲೆ ವ್ಯತಿರಿಕ್ತ ಪರಿಸ್ಥಿತಿ ಎದುರಿಸಬೇಕಾಗಿದೆ ಎಂದು ಹೇಳಿದರು.

ಯಾರು ತಾವು ವ್ಯಸನಿಗಳು ಎಂದು ಒಪ್ಪಿಕೊಂಡು ಅದರಿಂದ ದೂರಾಗಲು ಸ್ವಯಂ ಪ್ರೇರೇಪಣೆ ಪಡೆಯುತ್ತಾರೋ ಅವರು ಮಾತ್ರ ಇಂತಹ ಮಾರಕ ವ್ಯಸನದಿಂದ ಮುಕ್ತರಾಗಲು ಸಾಧ್ಯ. ವ್ಯಸನಗಳಿಗೆ ಬಲಿಯಾಗಿರುವ ಸಮುದಾಯ ತಮ್ಮ ಒಳ ಧ್ವನಿಯನ್ನು ಕೇಳಬೇಕಿದೆ. ಇಂದಿನ ಯುವ ಪೀಳಿಗೆ ಸುಲಭ ಮಾಹಿತಿಯ ಸಂಗ್ರಹಗಾರರು. ಈ ಸಮುದಾಯ ಸುಲಭವಾಗಿ ದಾರಿ ತಪ್ಪಲು ಅವಕಾಶವಿದ್ದು, ತಪ್ಪುದಾರಿ ಎಂದು ಅರಿತು ಮಾದಕ ವಸ್ತುಗಳಿಂದ ದೂರವಿರಬೇಕಾಗುತ್ತದೆ ಎಂದರು. ಮಾದಕ ವಸ್ತುಗಳ ವ್ಯಾಪಾರದಿಂದ ಅಪಾಯಕಾರಿ ಪರಿಸ್ಥಿತಿಯೇ ಎದುರಾಗಲಿದೆ ಎಂಬುದನ್ನು ಮನಗಾಣಬೇಕಿರುವ ಯುವ ಸಮುದಾಯ ತಮ್ಮ ಮೆದುಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೇ ವಿನಃ ಅನ್ಯರ ಮಾದಕ ಪ್ರೇರಣೆಗೆ ಗುರಿಯಾದರೆ ಸಮಾಜ ಗಂಭೀರ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದರು.

ವಿಶೇಷ ಉಪನ್ಯಾಸ ನೀಡಿದ ಪ್ರಾಧ್ಯಾಪಕಿ ಪ್ರೊ. ರಮ್ಯಾ ಕಲ್ಲೂರು ಕೆ.ವಿ. ಅವರು, ಯುವ ಸಮುದಾಯಕ್ಕೆ ಧನಾತ್ಮಕ ಆಲೋಚನೆಗಳೇ ಉತ್ತಮ ಬದುಕಿಗೆ ಬುನಾದಿ ಎಂದು ಹೇಳಿದರು.

ಸಹ ಪ್ರಾಧ್ಯಾಪಕ ಡಾ: ರಂಗಸ್ವಾಮಿ ಎಂ.ಆರ್. ಅವರು ವಿಶೇಷ ಉಪನ್ಯಾಸ ನೀಡಿದರು. ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ನಾಗಭೂಷಣ್ ಹೆಚ್., ಸಮಾಜಕಾರ್ಯ ವಿಭಾಗದ ಮುಖ್ಯಸ್ಥ ಕೆ.ಜಿ. ಪರಶುರಾಮ್, ಅಚರ್ಡ್ ಮದ್ಯವರ್ಜನ ಕೇಂದ್ರದ ಮುಖ್ಯಸ್ಥ ಸದಾಶಿವ, ತಹಶೀಲ್ದಾರ್ ರಾಜೇಶ್ವರಿ ಪಿ.ಎಸ್., ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಹಿಮಂತರಾಜು ಜಿ., ಡಾ. ಬಿ.ಆರ್. ಅಂಬೇಡ್ಕರ್ ಯುವಜನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ರಾಜಶೇಖರ್ ಉಪಸ್ಥಿತರಿದ್ದರು.

ಕಬಿನಿ ಜಲಾಶಯ ಭರ್ತಿ....

ಶುಭ ಘಳಿಗೆಯಲ್ಲಿ ಮೈಸೂರಿಗೆ ಬಂದಿದ್ದೇನೆ



ಶುಭ ಘಳಿಗೆ ಶುಭ ಮೂಹರ್ತದಲ್ಲೇ ಮೈಸೂರಿಗೆ ಬಂದಿದ್ದೇನೆ. ಕಬಿನಿ ಜಲಾಶಯ ಭರ್ತಿಯಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಎರಡು ರಾಜ್ಯಕ್ಕೆ ವರ ಎಂದು ಮೈಸೂರಿನಲ್ಲಿ ಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆ ನೀಡಿದ್ದಾರೆ.

ಎರಡೂ ರಾಜ್ಯಗಳನ್ನು ಕಾಪಾಡಲು ಆದೇಶ ಕೊಟ್ಟಿದ್ದಾರೆ. ಸ್ನೇಹಿತರು ಬಂದ್ ಮಾಡಲು ಹೇಳುತ್ತಿದ್ದಾರೆ. ಹೋರಾಟ ಮಾಡುವವರನ್ನ ಬೇಡ ಅನ್ನುವುದಿಲ್ಲ. ಹೋರಾಟ ಮಾಡುವುದು ಮಾಧ್ಯಮಕ್ಕೆ ಮಾತ್ರ ಸೀಮಿತವಾಗಬಾರದು. ಹೋರಾಟಕ್ಕೆ ಹಿನ್ನಲೆ ಇರಬೇಕು. ಆಸ್ತಿ ಪಾಸ್ತಿಗೆ ಹಾನಿಯಾಗಬಾರದು. ದಯವಿಟ್ಟು ಬಂದ್ ಮಾಡಬೇಡಿ ಎಂದು ಮನವಿ ಮಾಡುತ್ತೇನೆ.

ಇಂದು ಸಭೆಯಲ್ಲಿ ನೀರು ಬಿಡುವ ಬಗ್ಗೆ ಚರ್ಚೆ ಮಾಡುತ್ತೇನೆ. ಸದ್ಯ ಡ್ಯಾಂಗಳ ಸ್ಥಿತಿಗತಿಗಳ ಮಾಹಿತಿ ಇದೆ. ನೀರು ಬಿಡುವುದಿಲ್ಲ ಎಂದು ಹೇಳಿದರೆ ನೀರು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ. ನ್ಯಾಯಲಯಕ್ಕೆ ಗೌರವ ಕೊಡಬೇಕು. ರಾಜ್ಯದ ರೈತರ ಹಿತ ಕಾಯುತ್ತೇವೆ. ನಮಗೆ ದೊಡ್ಡ ಜಯ ಸುಪ್ರೀಂಕೋರ್ಟ್ ಕೊಟ್ಟಿದೆ. ಕೇಂದ್ರ ಸರ್ಕಾರ ಮೇಕೆದಾಟಿನ ಬಗ್ಗೆ ಕಾನೂನು ರೂಪಗೊಂಡಿದೆ ಎಂಬುದನ್ನ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಕುಮಾರಸ್ವಾಮಿ ಹೇಳಿಕೆ ಬಿಜೆಪಿ ಹೇಳಿಕೆಯನ್ನ ಗಮನಿಸಿದ್ದೇನೆ. ಮೇಕೆದಾಟು ಕಟ್ಟುವ ಬಗ್ಗೆ ತಮಿಳುನಾಡು ಈ ಹಿಂದೆ ಅನುಮತಿ ಕೊಟ್ಟಿರುವ ಬಗ್ಗೆ ದಾಖಲೆಗಳು ಇದೆ. ನ್ಯಾಯಾಲಯದ ತೀರ್ಪನ್ನ ಗೌರವಿಸಬೇಕು ಎಂದು ಮೈಸೂರಿನಲ್ಲಿ ಸಿಎಂ ಡಿ.ಕೆ ಶಿವಕುಮಾರ್ ಹೇಳಿಕೆ ನೀಡಿದ್ದಾರೆ.

ಕಾವೇರಿ ಆದೇಶ ವಿರೋಧಿಸಿ ತುಮಕೂರಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ರಾಜ್ಯಕ್ಕೆ ಅನ್ಯಾಯವಾಗುವ ರೀತಿಯ ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶವನ್ನು ವಿರೋಧಿಸುತ್ತಿರುವ ನಾರಾಯಣ ಗೌಡರ ಬಣದ ಕರ್ನಾಟಕ ರಕ್ಷಣ ವೇದಿಕೆಯಿಂದ ಶನಿವಾರ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು

ಬಿಜಿಎಸ್ ವೃತ್ತದಲ್ಲಿ ಕೆಲ ಕಾಲ ಪ್ರತಿಭಟನೆ ನಡೆಸಿದ ವೇದಿಕೆ ಕಾರ್ಯಕರ್ತರು ನಂತರ ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ಪಾದಯಾತ್ರೆ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಅರುಣ್ ಕೃಷ್ಣಯ್ಯ, ರಾಜ್ಯದಲ್ಲಿ ಈ ವರ್ಷದ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಸುರಿಯದ ಪರಿಣಾಮ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಕೊರತೆ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯದ ರೈತರ ಹಿತಾಸಕ್ತಿ ಹಾಗೂ ಕುಡಿಯುವ ನೀರಿನ ಭದ್ರತೆಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸುವುದು ಅತ್ಯಗತ್ಯವಾಗಿದೆ. ಆದರೆ ಕಾವೇರಿ ನೀರು ನಿಯಂತ್ರ ಸಮಿತಿ ಹಾಗೂ ನಿರ್ವಹಣಾ ಪ್ರಾಧಿಕಾರದ ತೀರ್ಪು ರಾಜ್ಯದ ಪಾಲಿಗೆ ಮರಣ ಶಾಸನವಾಗಿದೆ ಎಂದರು.


ಪ್ರಸ್ತುತ ಕೃಷ್ಣರಾಜ ಸಾಗರ ಜಲಾಶಯಕ್ಕೆ ಸುಮಾರು 2,800ರಿಂದ 3,000 ಕ್ಯೂಸೆಕ್ಸ್ ಮಾತ್ರ ಒಳ ಹರಿವು ಇದ್ದು, ಸುಮಾರು 1,700ರಿಂದ 1,800 ಕ್ಯೂಸೆಕ್ಸ್ ಹೊರ ಹರಿವು ಇದೆ. ಜಲಾಶಯದ ನೀರಿನ ಮಟ್ಟವೂ ಸುಮಾರು 92 ಅಡಿಗಳಷ್ಟೇ ಇದ್ದು, ಇದುಗರಿಷ್ಠ ಮಟ್ಟಕ್ಕಿಂತ ಸಾಕಷ್ಟು ಕಡಿಮೆಯಾಗಿದೆ. ಕೆಆರ್‌ಎಸ್ ಜಲಾಶಯದ ನೀರು ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ ಕುಡಿಯುವ ನೀರು, ಕೃಷಿ ಮತ್ತು ಕೈಗಾರಿಕಾ ಅಗತ್ಯಗಳಿಗೆ ಅತ್ಯಂತ ಪ್ರಮುಖವಾಗಿದೆ. ಅದೇ ರೀತಿ ಕಬಿನಿ ಜಲಾಶಯಕ್ಕೆ ಸುಮಾರು 12,000–15,000 ಕ್ಯೂಸೆಕ್ಸ್ ಒಳಹರಿವು ಇದ್ದರೂ, 10,000–14,000 ಕ್ಯೂಸೆಕ್ಸ್ ಹೊರ ಹರಿವು ನಡೆಯುತ್ತಿದ್ದು, ಅದರಲ್ಲಿ 8,000–11,000 ಕ್ಯೂಸೆಕ್ಸ್ ನೀರು ಕಾವೇರಿ ಮೂಲಕ ತಮಿಳುನಾಡಿನ ಕಡೆ ಹರಿಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಜಲಾಶಯಗಳಲ್ಲಿರುವ ನೀರನ್ನು ರಾಜ್ಯದ ಜನರ ಕುಡಿಯುವ ನೀರು, ರೈತರ ಕೃಷಿ ಹಾಗೂ ಭವಿಷ್ಯದ ಅಗತ್ಯಗಳಿಗೆ ಸಂರಕ್ಷಿಸುವುದು ಅತ್ಯಂತ ಅವಶ್ಯಕವಾಗಿದೆ ಎಂದು ಸರ್ಕಾರವನ್ನು ಒತ್ತಾಯಿಸಿದರು.

ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶವನ್ನು ರಾಜ್ಯದ ಹಿತಾಸಕ್ತಿಯ ಆಧಾರದ ಮೇಲೆ ಸರ್ಕಾರ ಬಲವಾಗಿ ವಿರೋಧಿಸಬೇಕು. ರಾಜ್ಯದ ಜಲಾಶಯಗಳ ವಾಸ್ತವಿಕ ನೀರಿನ ಸಂಗ್ರಹಣೆ ಹಾಗೂ ಮಳೆಯ ಕೊರತೆಯಕುರಿತು ಸಮಗ್ರ ವರದಿಯನ್ನು ಸಲ್ಲಿಸಿ ಕರ್ನಾಟಕದ ಪರವಾಗಿ ದೃಢವಾದ ವಾದ ಮಂಡಿಸಬೇಕು. ರಾಜ್ಯದ ಕುಡಿಯುವ ನೀರು ಹಾಗೂ ರೈತರ ಹಿತಾಸಕ್ತಿಗೆ ಯಾವುದೇಧಕ್ಕೆ ಯಾಗದಂತೆ ತಮಿಳುನಾಡಿಗೆ ಯಾವುದೇ ಕಾರಣಕ್ಕೂ ಹೆಚ್ಚುವರಿ ನೀರನ್ನು ಬಿಡುಗಡೆ ಮಾಡಬಾರದು. ಅಗತ್ಯವಿದ್ದಲ್ಲಿ ಸುಪ್ರೀಂ ಕೋರ್ಟ್ ಸೇರಿದಂತೆ ಎಲ್ಲ ಕಾನೂನು ವೇದಿಕೆಗಳಲ್ಲಿ ಕರ್ನಾಟಕದ ಹಕ್ಕುಗಳನ್ನು ಸಮರ್ಥವಾಗಿ ಪ್ರತಿಪಾದಿಸಬೇಕು. ಒಂದು ವೇಳೆ ಕರ್ನಾಟಕದ ಹಿತಾಸಕ್ತಿಯನ್ನು ಕಡೆಗಣಿಸಿ ತಮಿಳುನಾಡಿಗೆ ಹೆಚ್ಚುವರಿ ನೀರನ್ನು ಬಿಡುಗಡೆ ಮಾಡಿದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಬೃಹತ್ ಪ್ರತಿಭಟನೆ ಹಾಗೂ ಪ್ರಜಾಸತ್ತಾತ್ಮಕ ಹೋರಾಟವನ್ನು ಹಮ್ಮಿಕೊಳ್ಳುತ್ತದೆ ಎಂದು ಅರುಣ್ ಕೃಷ್ಣಯ್ಯ ಹೇಳಿದರು.

ನಂತರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು. ಕರವೇ ಜಿಲ್ಲಾಗೌರವಾಧ್ಯಕ್ಷ ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಅಂಬರೀಷ್, ಉಪಾಧ್ಯಕ್ಷರಾದ ಚನ್ನ ಬಸವಯ್ಯ, ಆದೇಶ್, ಸಂಘಟನಾ ಕಾರ್ಯದರ್ಶಿ ಮಿಸ್ಬಾ ಬಾರಿ, ಜಿಲ್ಲಾ ಯುವ ಘಟಕ ಅಧ್ಯಕ್ಷ ಪವನ್, ಲಿಂಗರಾಜು, ವಿವಿಧ ತಾಲ್ಲೂಕುಗಳ ಅಧ್ಯಕ್ಷರಾದ ಶಶಿಧರ್, ಶಿವಕುಮಾರ್, ಪ್ರಕಾಶ್, ಉಮೇಶ್ ಮತ್ತಿತರರು ಭಾಗವಹಿಸಿದ್ದರು.

ಕಮಲಗಂಗಹನುಮಯ್ಯನವರ ರಾಜಕೀಯ ಸೇವೆ ಸ್ಮರಣೀಯವಾದದ್ದು; ಸಚಿವ ಕೆ.ಎಚ್.ಮುನಿಯಪ್ಪ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ತಳಸಮುದಾಯದಲ್ಲಿ ಜನಿಸಿದವರು ರಾಜಕೀಯ, ಸಾಮಾಜಿಕ ಸೇವೆಗಳಲ್ಲಿ ತೊಡಗಿಕೊಂಡು ಒಂದಲ್ಲ ಒಂದು ರೀತಿಯಲ್ಲಿ ಜನರಿಗೆ ಸಹಾಯ ಮಾಡಲು ಹೊರಟಿರುತ್ತಾರೆ ಈ ನಿಟ್ಟಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಕಮಲ ಗಂಗಹನುಮಯ್ಯನವರು ಸ್ಮರಣೀಯವಾದ ರಾಜಕೀಯ ಸೇವೆಯನ್ನ ನೀಡಿದ್ದಾರೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ ಅವರು ತಿಳಿಸಿದರು.

ನಗರದ ಕೋತಿತೋಪಿನ ಮಾಜಿ ಶಾಸಕ ಗಂಗಹನುಮಯ್ಯ ಅವರ ಮನೆಯಲ್ಲಿ ಧರ್ಮಪತ್ನಿ ಕಮಲ ಗಂಗಮ್ಮ ಅವರ ಉತ್ತರಕ್ರಿಯಾದಿ ವೈಕುಂಠ ಸಮಾರಾಧನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಚಿವರು ಮಾತನಾಡಿದರು.

ತುಮಕೂರು ಜಿಲ್ಲೆಯಲ್ಲಿ ಬಹು ಸಂಖ್ಯಾತರಾಗಿರುವ ಮಾದಿಗ ಸಮುದಾಯವು ಇದೀಗ ಒಗ್ಗಟ್ಟಾಗುತ್ತಿದ್ದು ಮುಂಬರುವ ದಿನಗಳಲ್ಲಿ ಮಾದರ ಮಹಾಸಭಾದ ಸಂಘಟನೆ ವತಿಯಿಂದ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಮುಂದೆ ಬರಲು ಅನೇಕ ಯೋಜನೆಗಳನ್ನು ರೂಪಿಸಲಾಗುವುದು ಈ ನಿಟ್ಟಿನಲ್ಲಿ ಮಾಜಿ ಶಾಸಕರಾದ ಗಂಗಮ್ಮಯ್ಯನವರ ಪಾತ್ರವು ಬಹು ಮುಖ್ಯವಾಗಿದ್ದು ಅವರ ಧರ್ಮಪತ್ನಿ ಕಮಲಮ್ಮನವರು ಸಂಘಟನಾತ್ಮಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ತಿಳಿಸಿದರು.


ರಾಜ್ಯದಲ್ಲಿ ಮುಂಗಾರು ಮಳೆ ದುರ್ಬಲ ಗೊಂಡಿರುವ ಕಾರಣದಿಂದಾಗಿ ಬರಗಾಲ ತಲೆದೋರಿದ್ದು ತಮಿಳುನಾಡಿಗೆ ನೀರು ಬಿಡುವ ಸಾಧ್ಯತೆಗಳು ಗೋಚರಿಸುವುದಿಲ್ಲ ಕಾವೇರಿ ನೀರು ಹಂಚಿಕೆ ಪ್ರಾಧಿಕಾರಕ್ಕೆ ಈಗಾಗಲೇ ಜಲಾಶಯದಲ್ಲಿರುವ ನೀರಿನ ಮಟ್ಟದ ಮನವರಿಕೆಯನ್ನು ಅಧಿಕಾರಿಗಳು ಮಾಡಿದ್ದು ಈ ಕುರಿತಾಗಿ ನಾಳೆ ನಡೆಯಲಿರುವ ಸರ್ವ ಪಕ್ಷಗಳ ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಈ ಹಿನ್ನೆಲೆಯಲ್ಲಿ ರಾಜ್ಯದ ಜನರು ಶಾಂತಿ ಸೌಹಾರ್ದತೆ ಕಾಪಾಡಬೇಕು ಕಾನೂನನ್ನ ಕಾಪಾಡಿಕೊಳ್ಳಬೇಕು ಯಾರೂ ಕೂಡ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಬಾರದು ಶಾಂತಿಯುತವಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಿದೆ ಎಂದು ಈ ವೇಳೆ ತಿಳಿಸಿದರು.. ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಹೆಚ್.ಹುಚ್ಚಯ್ಯ ಅವರು ಮಾತನಾಡಿ ನಮ್ಮ ಸಮುದಾಯದ ಧೀಮಂತ ರಾಜಕಾರಣಿಯಾಗಿದ್ದ ಕಮಲಮ್ಮನವರು ಅವರ ಪತಿ ಗಂಗಹನುಮಯ್ಯನವರು ಶಾಸಕರಾಗಿದ್ದ ಕಾಲದಿಂದಲೂ ಸಕ್ರಿಯ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದವರು ಸಮುದಾಯದ ಜನರನ್ನು ಗುರುತಿಸುತ್ತಾ ಸಾಮಾಜಿಕ ಸೇವೆಗಳಲ್ಲಿ ಪಾಲ್ಗೊಂಡು ಸಮಾಜದ ಹಿತದೃಷ್ಟಿಗೆ ದುಡಿದ ದಿಟ್ಟ ಮಹಿಳೆಯಾಗಿದ್ದಾರೆ ಇವರ ಅಗಲಿಕೆಯು ನಮ್ಮ ಸಮಾಜಕ್ಕೆ ತುಂಬಾ ನಷ್ಟವನ್ನ ಉಂಟು ಮಾಡಿದೆ ಎಂದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಮಾಜಿ ಸಂಸದ ಚಂದ್ರಪ್ಪ, ಮಾಜಿ.ಶಾಸಕ ಗಂಗಹನುಮಯ್ಯ, ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಹೆಚ್. ಹುಚ್ಚಯ್ಯ, ಡಿಸಿಸಿ ಬ್ಯಾಂಕ್ ಉಪಧ್ಯಾಕ್ಷ ಜಿ.ಜೆ.ರಾಜಣ್ಣ, ಮಹಾಸಭಾದ ಮುಖಂಡರುಗಳಾದ ನರಸಿಯಪ್ಪ, ಗಂಗರಾಜು ಬಾಲಕೃಷ್ಣ, ಡಾ, ಎಲ್ ಮುಕುಂದ, ತುಮಕೂರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಯೋಗೀಶ್, ಉಪಾಧ್ಯಕ್ಷ ಬಿಟ್ಟನಕುರಿಕೆ ಜಯನುಡಿ ಜಯಣ್ಣ, ನಿರ್ದೇಶಕರುಗಳು ಹಾಗೂ ಹನುಮಂತರಾಯಪ್ಪ, ಸಿದ್ದಪುರ ರಂಗಶಾಮಯ್ಯ, ಸೇರಿದಂತೆ ಗಂಗಹನುಮಯ್ಯನವರ ಮಕ್ಕಳು, ಕುಟುಂಬಸ್ಥರು ಹಾಗೂ ವಿವಿಧ ಸಮುದಾಯಗಳ ಮುಖಂಡರು ಇತರರು ಉಪಸ್ಥಿತರಿದ್ದರು.

ಮೂರು ದಿನಗಳಿಂದ ಬೀಗ ಹಾಕಿದ ಸರ್ಕಾರಿ ಆಡಳಿತ ವೈದ್ಯಾಧಿಕಾರಿ

ವರದಿ; ನರಸಿಂಹಪ್ಪ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ,, ಸರ್ಕಾರಿ ಆಸ್ಪತ್ರೆಯ ಜವಾಬ್ದಾರಿತ ಆಡಳಿತ ವೈದ್ಯಾಧಿಕಾರಿಯ ನಿರ್ಲಕ್ಷತನದಿಂದ ಮೂರು ದಿನದಿಂದ ಕಚೇರಿಗೆ ಮತ್ತು ಸ್ಕ್ಯಾನಿಂಗ್ ರೂಮ್ಗೆ ಬೀಗ ಹಾಕಿ ಎಲ್ಲೆಲ್ಲೋ ಅಲೆದಾಡುತ್ತಿದ್ದರು ಇದರ ಬಗ್ಗೆ ಕಿಂಚತ್ತು ಗಮನಹರಿಸದ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು ಅಸಹಾಯಕತೆಯಿಂದ ರೋಗಿಗಳು ಬೇಸತ್ತು ಹೋಗಿದ್ದಾರೆ. ವಾರದಲ್ಲಿ ಎರಡು ಅಥವಾ ಮೂರು ದಿನ ಮಾತ್ರ ಆಡಳಿತ ವೈದ್ಯಧಿಕಾರಿಯು ಕೆಲಸ ನಿರ್ವಹಿಸುತ್ತಿದ್ದು ಇನ್ನುಳಿದಂತೆ ಮೇಲಾಧಿಕಾರಿಗಳ ಅನುಮತಿ ಕೇಳದೆ ಈ ಕಡೆ ರಜೆಯನ್ನು ಕೇಳದೆ ತಮ್ಮ ಇಷ್ಟ ಬಂದಂತೆ ವರ್ತಿಸುತ್ತಿದ್ದಾರೆ ಎಂದು ಆಸ್ಪತ್ರೆಗೆ ಬಂದ ರೋಗಿಗಳು ಆರೋಪಿಸುತ್ತಿದ್ದಾರೆ. ಬಡವರು ಮತ್ತು ಗರ್ಭಿಣಿಯರು ಸ್ಕ್ಯಾನಿಂಗ್ ಗೆಂದು ಸರ್ಕಾರಿ ಆಸ್ಪತ್ರೆಯನ್ನು ನಂಬಿ ಬಂದರೆ ಸಮಯಕ್ಕೆ ವೈದ್ಯರು ಇಲ್ಲದ ಕಾರಣ ಪ್ರಾಣಭಯದ ಮುಂದೆ ಹಣ ಲೆಕ್ಕಿಸದೆ ಸಾವಿರಾರು ರೂಪಾಯಿ ಕೊಟ್ಟು ಖಾಸಗಿ ಸ್ಕ್ಯಾನಿಂಗ್ ಗೆ ಮೊರೆ ಹೋಗುತ್ತಿದ್ದಾರೆ. ಈ ಘಟನೆಯನ್ನು ನಾಲ್ಕು ತಿಂಗಳ ಗಳಿಂದ ಸಂಬಂಧ ಪಟ್ಟ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೂ ಮತ್ತು ಶಾಸಕರ ಗಮನಕ್ಕೂ ತಂದರು ಅವರ ಅಸಹಾಯಕತೆಯಿಂದ ಏನು ಮಾಡಲಾಗದೆ ಕೈಕಟ್ಟಿ ಕುಳಿತಿರುವುದು ಶೋಚನಿಯ ಎಂದು ಅಳಲು ತೋಡಿಕೊಳ್ಳುತ್ತಿದ್ದಾರೆ. ಕೇಂದ್ರಸ್ಥಾನದಲ್ಲಿ ಉಳಿದುಕೊಂಡು ಸೇವೆ ಸಲ್ಲಿಸಲು ಸರ್ಕಾರ ಆದೇಶ ಕೊಟ್ಟು ಮತ್ತು ಅವರಿಗೆ ಕ್ವಾಟ್ರಸ್ ಕೊಟ್ಟಿದ್ದರು ಅದನ್ನು ಲೆಕ್ಕಿಸದೆ ತುಮಕೂರು ಬೆಂಗಳೂರ ಎಂದು ಓಡಾಡಿಕೊಂಡು ಕಾಲಹರಣ ಮಾಡುತ್ತಿರುವ ವೈದ್ಯಾಧಿಕಾರಿಯನ್ನು ಕೂಡಲೇ ಬದಲಾಯಿಸಿದರೆ ಮಾತ್ರ ಪಾವಗಡ ಆಸ್ಪತ್ರೆಗೆ ಹಿಡಿದಿರುವ ಶನಿ ತಲುಪುತ್ತದೆಂದು ಜನರು ಇಡೀ ಶಾಪ ಹಾಕುತ್ತಿದ್ದಾರೆ.

ನಾವು ಮನೆಯಲ್ಲಿ ಮಾಡುವ ಒಂದು ಸಣ್ಣ ತಪ್ಪಿನಿಂದ ಕಾಲು ನೋವು ಬರುತ್ತದೆ





ಮನೆಯಲ್ಲಿ ಈ ಒಂದು ವಸ್ತು ಬಳಸದಿದ್ದರೆ ತೊಂದರೆಗೆ ಸಿಲುಕುತ್ತೀರಿ.. ಕಾಲು ನೋವಿಗೆ ಇದೇ ಮುಖ್ಯ ಕಾರಣ!

: ಕಾಲು ನೋವು ಎಂಬುದು ನಮ್ಮ ಪಾದದ ಸ್ನಾಯುಗಳು ಅಥವಾ ಮೂಳೆಗಳ ಮೇಲೆ ಅತಿಯಾದ ಒತ್ತಡ ಬಿದ್ದಾಗ ಉಂಟಾಗುವ ಒಂದು ಸಂಕೇತವಾಗಿದೆ. ಇದನ್ನು ನಿರ್ಲಕ್ಷಿಸಿದರೆ ಮುಂದೆ ಮೊಣಕಾಲು ಮತ್ತು ಸೊಂಟದ ನೋವಿಗೂ ಕಾರಣವಾಗಬಹುದು.

ನಾವು ಮನೆಯಲ್ಲಿ ಮಾಡುವ ಒಂದು ಸಣ್ಣ ತಪ್ಪಿದು ಇತ್ತೀಚಿನ ದಿನಗಳಲ್ಲಿ ಸಣ್ಣ ಮಕ್ಕಳಿಂದ ಹಿಡಿದು 40 ದಾಟಿದ ಮಹಿಳೆಯರವರೆಗೆ ಕಾಲು ನೋವು (ಈಅಠಣ ಕಚುಟಿ) ಒಂದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಹೆಚ್ಚು ಹೊತ್ತು ನಿಂತು ಕೆಲಸ ಮಾಡಲು ಅಥವಾ ನಡೆಯಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಪ್ರಮುಖ ಕಾರಣ ನಮ್ಮ ಬದಲಾದ ಜೀವನಶೈಲಿ ಮತ್ತು ನಾವು ಮನೆಯಲ್ಲಿ ಮಾಡುವ ಒಂದು ಸಣ್ಣ ತಪ್ಪು ಎಂದು ವೈದ್ಯರು ಹೇಳುತ್ತಾರೆ.

ರಕ್ತ ಸಂಚಾರ ಸರಾಗವಾಗಿ ನಡೆಯುತ್ತಿತ್ತು

ನಮ್ಮ ಜೀವನಶೈಲಿ ಆಧುನಿಕವಾದಂತೆ ನಮಗೆ ಅರಿವಿಲ್ಲದೆಯೇ ಕೆಲವು ಆರೋಗ್ಯ ಸಮಸ್ಯೆಗಳನ್ನು ನಾವೇ ಆಹ್ವಾನಿಸುತ್ತಿದ್ದೇವೆ. ಹಿಂದಿನ ಕಾಲದಲ್ಲಿ ಮನೆಗಳಲ್ಲಿ ಮಣ್ಣಿನ ನೆಲ ಅಥವಾ ಗಡುಸಾದ ಕಲ್ಲುಗಳನ್ನು ಹಾಕಲಾಗುತ್ತಿತ್ತು. ಅಂತಹ ನೆಲದ ಮೇಲೆ ಬರಿಗಾಲಿನಲ್ಲಿ ನಡೆಯುವಾಗ ಪಾದದ ನರಗಳು ಪ್ರಚೋದನೆಗೊಂಡು, ಪಾದದಿಂದ ದೇಹದ ಮೇಲ್ಭಾಗದವರೆಗೆ ರಕ್ತ ಸಂಚಾರ ಸರಾಗವಾಗಿ ನಡೆಯುತ್ತಿತ್ತು. ಅಷ್ಟೇ ಅಲ್ಲದೆ, ದೇಹದ ಭಾರವು ಪಾದದ ಮೇಲೆ ಸಮನಾಗಿ ಹಂಚಿಕೆಯಾಗುತ್ತಿತ್ತು.

ಮೊಣಕಾಲು ನೋವು ಬರುತ್ತೆ

ಆದರೆ ಇಂದು ಮನೆಗಳ ಸೌಂದರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಮನೆಯ ಗೇಟಿನಿಂದ ಹಿಡಿದು ಒಳಗಿನವರೆಗೂ ನುಣುಪಾದ ಮಾರ್ಬಲ್, ಗ್ರಾನೈಟ್ ಅಥವಾ ಟೈಲ್ಸ್‌ಗಳನ್ನು ಹಾಕಲಾಗುತ್ತದೆ. ಇವು ನೋಡಲು ಸುಂದರವಾಗಿದ್ದರೂ, ಪಾದಗಳಿಗೆ ತುಂಬಾ ಕಠಿಣವಾಗಿರುತ್ತವೆ. ಈ ಅತ್ಯಂತ ನುಣುಪಾದ ಮತ್ತು ಗಟ್ಟಿಯಾದ ನೆಲದ ಮೇಲೆ ನಾವು ಬರಿಗಾಲಿನಲ್ಲಿ ನಡೆದಾಗ, ದೇಹದ ಸಂಪೂರ್ಣ ಭಾರವು ನೇರವಾಗಿ ಪಾದಗಳ ಮೇಲೆ ಬೀಳುತ್ತದೆ. ಇದರಿಂದ ಕಾಲಿನಲ್ಲಿ ಉರಿ ಮತ್ತು ನೋವು ಕಾಣಿಸಿಕೊಳ್ಳುತ್ತದೆ. ಇದು ದೀರ್ಘಕಾಲ ಮುಂದುವರಿದರೆ ಮೊಣಕಾಲು ನೋವಿಗೂ ದಾರಿಯಾಗುತ್ತದೆ.

ಮೆತ್ತನೆಯ ಪಾದರಕ್ಷೆ ಧರಿಸಿ

ಈ ಸಮಸ್ಯೆಗೆ ಸರಳ ಪರಿಹಾರವೆಂದರೆ ಮನೆಯೊಳಗೆ ನಡೆಯುವಾಗ ಕಡ್ಡಾಯವಾಗಿ ಮೆತ್ತನೆಯ ಪಾದರಕ್ಷೆ ಅಥವಾ ಸ್ಲಿಪ್ಪರ್‌ಗಳನ್ನು ಧರಿಸುವುದು. ಮನೆಯೊಳಗೆ ಧರಿಸಲೆಂದೇ ಪ್ರತ್ಯೇಕವಾದ ಮತ್ತು ಆರಾಮದಾಯಕವಾದ ಚಪ್ಪಲಿಗಳನ್ನು ಇಟ್ಟುಕೊಳ್ಳಿ, ಇದು ಪಾದಗಳ ಮೇಲೆ ಬೀಳುವ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ರಕ್ತ ಸಂಚಾರವನ್ನು ಉತ್ತಮಗೊಳಿಸುತ್ತದೆ.

ತಾಲ್ಲೂಕಿನ ಸಮಗ್ರ ನೀರಾವರಿ ಯೋಜನೆ, ಅಭಿವೃದ್ಧಿಗೆ ಸದಾ ನಿಮ್ಮೊಂದಿಗಿರುತ್ತೇನೆ; ಶಾಸಕ ಸಿ.ಬಿ.ಸುರೇಶ್‌ಬಾಬು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ:-ನಿಮ್ಮೊಂದಿಗೆ ನಾನು ಇರುತ್ತೇನೆ ತಾಲ್ಲೂಕಿನ ಮೂರು ನೀರಾವರಿ ಯೋಜನೆಗಳ ಸಮಗ್ರ ಮಾಹಿತಿಯನ್ನು ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ನೇರವಾಗಿ ಮಾಹಿತಿ ನೀಡಲಾಗುವುದು ಹಾಗೂ ಮುಂದಿನ ಮಂಗಳವಾರದೊಳಗೆ ಕಾಮಗಾರಿಯ ಒಂದು ಹಂತವನ್ನು ಸಂಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌದದ ಮುಂಭಾಗ 3ನೇ ದಿನಕ್ಕೆ ಕಾಲಿಟ್ಟಿರುವ ನೀರಾವರಿ ಯೋಜನೆಯ ಪ್ರತಿಭಟನಾಕಾರರೊಂದಿಗೆ ಮಾತನಾಡಿದ ಅವರು ಮುಖ್ಯ ಕೆನಾಲ್‌ನಿಂದ ದಬ್ಬೇಘಟ್ಟದವರೆಗೆ ಈಗಾಗಲೇ ಶೇಕಡ 90ರಷ್ಟ ಕಾಮಗಾರಿ ಸಂಪೂರ್ಣವಾಗಿದೆ ಅದರಂತೆ ಹಿಂದಿನ ಶೆಟ್ಟಿಕೆರೆ ಭಾಗದ ಕೆನಾಲ್‌ನಲ್ಲಿರುವ ಸೇತುವೆಗಳ ಕೆಳಗಿರುವಂತಹ ಹೂಳನ್ನುತೆಗೆಯಲಾಗಿದ್ದು ಈ ಬಾರಿ ಗೊರೂರು ಡ್ಯಾಂ ನಿಂದ ಮುಖ್ಯನಾಲೆಯಲ್ಲಿ ಹೇಮಾವತಿ ಹರಿಯುವ ವೇಳೆಗೆ ದಬ್ಬೇಘಟ್ಟದ ಕೆರೆವರೆಗೆ ಹರಿಸಲಾಗುವುದು ದಬ್ಬೇಘಟ್ಟದಿಂದ ಮುಂದೆ ನವಿಲೆಯವರೆಗೆ ಹರಿಯಲಿದೆ. ತಾಲ್ಲೂಕಿಗೆ ಎತ್ತಿನ ಹೊಳೆಯ ಮೂಲಕ, ಭದ್ರಮೇಲ್ದಂಡೆಯೋಜನೆಯ ಮೂಲಕ ನಮ್ಮ ಕ್ಷೇತ್ರದ ಕೆರೆಗಳಿಗೆ ಹಂಚಿಕೆಯಾಗಿರುವ ನೀರಿನ ಪ್ರಮಾಣ, ಹಾಗೂ ಕಾಮಗಾರಿಯ ಸ್ಥಿತಿಗತಿಯ ಬಗ್ಗೆ ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳನ್ನೇ ಸೋಮವಾರ ಈ ಸ್ಥಳಕ್ಕೆ ಕರೆಯಿಸಿ ಸಮಗ್ರ ಮಾಹಿತಿಯನ್ನು ತಿಳಿಸಲಾಗುವುದು, 2011ರಲ್ಲಿ ಪ್ರಾರಂಭವಾದ ಈ ಹೇಮಾವತಿ ಕಾಮಗಾರಿ ಅಂದಿನಿಂದ ಅವರವರ ಅವಧಿಯಲ್ಲಿ ಕಾಮಗಾರಿ ನಡೆದು ಇಂದು ಈ ಹಂತಕ್ಕೆ ಬಂದಿದೆ ಇದಕ್ಕೆ ಎಲ್ಲರ ಕೊಡುಗೆಇದ್ದು ಇನ್ನು ನೀರುಹರಿಸುವ ಬಗ್ಗೆ ಅಂತಕ ಪಡುವ ಅಗತ್ಯವಿಲ್ಲ ಚಿಕ್ಕನಾಯಕನಹಳ್ಳಿ ಮೂಲಕ ಕಂದಿಕೆರೆಯಿಂದ ಬೋರನಕಣಿವೆಗೆ ಹೋಗುವ ಹಾಗೂ ಕುಪ್ಪೂರುಕೆರೆ ಭಾಗಕ್ಕೆ ಹೋಗುವಂತಹ ಕಾಮಗಾರಿಯ ಬಗ್ಗೆಯು ಸೋಮವಾರ ಅಧಿಕಾರಿಗಳೊಂದಿಗೆ ಮಾಹಿತಿ ನೀಡಲಾಗುವುದು ಎಂದ ಅವರು ನಮ್ಮ ನೀರಿನ ಮೂಲಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಅಗತ್ಯವಿರುವಂತಹ ಕೆಲಸಗಳನ್ನು ಮಾಡಲಾಗುತ್ತಿದ್ದು ಗಿಣಿ ವಜ್ರದ ಬಳಿ ಚೆಕ್‌ಡ್ಯಾಂ ಮಾಡಿ ಅಲ್ಲಿಂದ ಕಂದಿಕೆರೆ ತಿಮ್ಮನಹಳ್ಳಿ, ರಾಮನಹಳ್ಳಿ ಭಾಗಕ್ಕೆ ನೀರು ನೀಡುವುದು, ಸಿಂಗದಹಳ್ಳಿ ಕೆರೆಯಿಂದ ತೀರ್ಥಪುರ ಭಾಗಕ್ಕೆ ನೀಡುವುದು, ಬೋರನಕಣಿವೆಯಿಂದ ಸುಮಾರು 5 ಗ್ರಾಮಪಂಚಾಯಿತಿಗಳಿಗೆ ನೀರು ನೀಡುವುದು, ಶೆಟ್ಟಿಕೆರೆ ಕೆರೆಯಿಂದ ಆ ಭಾಗದ ಪಂಚಾಯಿತಿಗಳಿಗೆ ಸೇರಿದಂತೆ ತಾಲ್ಲೂಕಿನ 27ಗ್ರಾಮಪಂಚಾಯಿತಿಗಳಿಗೂ ಸಮರ್ಪಕವಾಗಿ ಕುಡಿಯುವ ನೀರನ್ನು ನೀಡುವುದು ನಮ್ಮ ಉದ್ದೇಶವಾಗಿದೆ ಎಂದರು. ಮಂಗಳವಾರ ಸಂಜೆ ವೇಳೆಗೆ ದಬ್ಬೇಘಟ್ಟದವರೆಗೆ ಕಾಮಗಾರಿ ಮುಗಿಯಲಿದೆ ಎಂದು ತಿಳಿಸಿದ್ದು ಎಲ್ಲಾರು ದಿನಾಂಕ ನಿಗದಿಪಡಿಸಿದರೆ ಒಂದು ದಿನ ನಮ್ಮ ಭಾಗದ ಕೆನಾಲ್ ಪ್ರಾರಂಭದಿಂದ ಇಲ್ಲಿಯವರೆಗೆ ಆಗಿರುವಂತಹ ಕಾಮಗಾರಿ ವೀಕ್ಷಣೆಯನ್ನು ಕಾರ್ಯವನ್ನು ರೂಪಿಸುವುದಾಗಿ ತಿಳಿಸಿದರು.



ಪ್ರತಿಭಟನೆ ಸ್ಥಳಕ್ಕೆ ಬೇಟಿ ನೀಡಿದ ಉಪವಿಭಾಗಾಧಿಕಾರಿ ಸಪ್ತಶ್ರೀ ರೈತರೊಂದಿಗೆ ಮಾತುಕತೆ ನಡೆಸಿ ಸೋಮವಾರ ನೀರಾವರಿ ಇಲಾಖೆಯ ಅಧಿಕಾರಿಗಳ ಸಭೆಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ನಡೆಸಿ ಎಲ್ಲಾ ಮಾಹಿತಿಯನ್ನು ತಿಳಿಸಲಾಗುವುದು ಎಂದ ಅವರು ಪ್ರತಿಭಟನೆಯಲ್ಲಿ ವೃದ್ದರು , ಮಹಿಳೆಯರು ಭಾಗವಹಿಸಿದ್ದೀರ ನಿಮ್ಮ ಅರೋಗ್ಯವನ್ನು ನೋಡಿಕೊಳ್ಳಿ ಇನ್ನು ಐದು ದಿನದಲ್ಲಿ ದಬ್ಬೇಘಟ್ಟದವರೆಗೆ ನವಿಲೇ ಭಾಗದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಬಸವರಾಜು ಮಾತನಾಡಿ ನೂರಾರು ಕಿ.ಮೀ.ಗಳಷ್ಟು ಕಾಮಗಾರಿಯನ್ನು ಮಾಡಿ ಹೇಮಾವತಿ ನೀರನ್ನು ತೆಗೆದುಕೊಂಡು ಹೋಗಿದ್ದಾರೆ ಕೇವಲ ಏಳು ಕಿ.ಮೀ.ಕಾಮಗಾರಿಯನ್ನು ಮಾಡಿ ನಮ್ಮ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ ಇನ್ನಾದರು ಸರ್ಕಾರ, ಅಧಿಕಾರಿಗಳು ಕೂಡಲೇ ಈ ಕಾಮಗಾರಿಯನ್ನು ಸಂಪೂರ್ಣಗೊಳಿಸಬೇಕು ಈ ಹೋರಾಟಕ್ಕೆ ನಮ್ಮ ಸಂಪೂರ್ಣಬೆಂಬಲವಿದೆ ಎಂದರು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಅಧ್ಯಕ್ಷ ಶ್ಯಾವಿಗೆಹಳ್ಳಿ ಮಧು ಮಾತನಾಡಿ ಇದುವರೆಗೆ ನಮ್ಮ ತಾಲ್ಲೂಕಿನ ರೈತರಿಗೆ ನಮ್ಮ ಭಾಗದ ನೀರು ಎಷ್ಟು ಯಾವ ಯಾವ ಯೋಜನೆಯಿಂದ ಎಷ್ಟು ನೀರು ಹಂಚಿಕೆಯಾಗಿದೆ ಎಂಬುದರ ಸರಿಯಾದ ಮಾಹಿತಿ ಇಲ್ಲ ಇನ್ನಾದರು ಅಧಿಕಾರಿಗಳು ನಮಗೆ ಸರಿಯಾದ ಮಾಹಿತಿ ನೀಡಬೇಕು ಈ ಹೇಮಾವತಿ ಕಾಮಗಾರಿ ಯಾವಾಗ ಮುಗಿಸುತ್ತಾರೆ ಅಲ್ಲಿಯವರೆಗೆ ನಾವು ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಮತಾ ಎಂ, ರೈತಸಂಘದ ಅಧ್ಯಕ್ಷ ಹೊಸಹಳ್ಳಿ ಚಂದ್ರಣ್ಣ, ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಆನಂದಣ್ಣ ಮತ್ತಿಘಟ್ಟ ಶೆಟ್ಟಿಕೆರೆ ತಾಲೂಕ ಅತ್ಯಂತ ರೈತರು ಭಾಗವಹಿಸಿದ್ದರು ಸೇರಿದಂತೆ ಹೋರಟದಲ್ಲಿ ರೈತ ಮಹಿಳೆಯರು ಮತ್ತಿತರರು ಇದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ರಂಗಭೂಮಿಯ ಕೊಡುಗೆ

ಸೂರ್ಯಪ್ರಗತಿನ್ಯೂಸ್.ಕಾಂ



ಮಂಚಾಲದೊರೆ: ಸ್ವಾತಂತ್ರ್ಯ ಹೋರಾಟದಲ್ಲಿ ರಂಗಭೂಮಿ ಕೇವಲ ಮನರಂಜನೆಯ ಸಾಧನವಾಗಿರದೆ, ಜನರಲ್ಲಿ ದೇಶಭಕ್ತಿ, ಸ್ವಾಭಿಮಾನ ಹಾಗೂ ಸ್ವಾತಂತ್ರ್ಯದ ಚೇತನವನ್ನು ಮೂಡಿಸಿದ ಪ್ರಬಲ ಮಾಧ್ಯಮವಾಗಿತ್ತು ಎಂದು ರಂಗ ನಿರ್ದೇಶಕ ಅನುರಾಗ್ ಭೀಮಸಂದ್ರ ಅಭಿಪ್ರಾಯಪಟ್ಟರು.

ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ಮಂಚಾಲದೊರೆಯಲ್ಲಿ ಅಭಿನವ ರಂಗ ಸಂಪನ್ಮೂಲ ಕೇಂದ್ರ (ರಿ.), ತುಮಕೂರು ವತಿಯಿಂದ ಆಯೋಜಿಸಿದ್ದ "ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ರಂಗಭೂಮಿಯ ಕೊಡುಗೆ" ವಿಚಾರಗೋಷ್ಠಿ ಕಾರ್ಯಕ್ರಮವನ್ನು ಗಿಡಗಳಿಗೆ ನೀರುಣಿಸುವ ಮೂಲಕ ಉದ್ಘಾಟಿಸಲಾಯಿತು.

ನಂತರ ವಿಷಯ ಮಂಡಿಸಿದ ಅನುರಾಗ್ ಭೀಮಸಂದ್ರ ಅವರು, ಬ್ರಿಟಿಷರ ಆಡಳಿತದಲ್ಲಿ ಸಭೆ-ಸಮಾರಂಭಗಳು ಮತ್ತು ದೇಶಭಕ್ತಿ ಭಾಷಣಗಳಿಗೆ ನಿರ್ಬಂಧಗಳಿದ್ದ ಸಂದರ್ಭದಲ್ಲಿ, ನಾಟಕಗಳು, ಬೀದಿ ನಾಟಕಗಳು ಹಾಗೂ ಪೌರಾಣಿಕ ಕಥೆಗಳ ರೂಪಕಗಳ ಮೂಲಕ ಕಲಾವಿದರು ಸ್ವಾತಂತ್ರ್ಯದ ಸಂದೇಶವನ್ನು ಜನರಿಗೆ ತಲುಪಿಸಿದರು ಎಂದು ವಿವರಿಸಿದರು. 'ನೀಲ ದರ್ಪಣ', 'ಕೀಚಕ ವಧ', 'ಭಾರತ ದುರ್ದಶಾ' ಮೊದಲಾದ ನಾಟಕಗಳು ರಾಷ್ಟ್ರೀಯ ಪ್ರಜ್ಞೆ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದವು ಎಂದರು.

ಬಳಿಕ ಮಾತನಾಡಿದ ಸಮಾಜ ವಿಜ್ಞಾನ ಉಪಾಧ್ಯಾಯರಾದ ಶ್ರೀಧರ್, ಭಾರತದ ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಚಳವಳಿಯಾಗಿರಲಿಲ್ಲ; ಅದು ಸಾಮಾಜಿಕ ಮತ್ತು ಸಾಂಸ್ಕೃತಿಕ ಜಾಗೃತಿಯ ಚಳವಳಿಯೂ ಆಗಿತ್ತು. ಆ ಜಾಗೃತಿಯನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ರಂಗಭೂಮಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇತಿಹಾಸವನ್ನು ಪುಸ್ತಕಗಳಲ್ಲಿ ಓದುವುದಕ್ಕಿಂತ ನಾಟಕದ ಮೂಲಕ ನೋಡುವುದು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಬೀರುತ್ತದೆ. ಆದ್ದರಿಂದ ಶಾಲೆಗಳಲ್ಲಿ ಇಂತಹ ವಿಚಾರಗೋಷ್ಠಿಗಳು ಹಾಗೂ ನಾಟಕ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯರಾದ ನಾಗರಾಜು, ರಂಗಭೂಮಿಯು ವ್ಯಕ್ತಿತ್ವ ವಿಕಸನಕ್ಕೆ ಅತ್ಯುತ್ತಮ ಮಾಧ್ಯಮವಾಗಿದ್ದು, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಶಿಸ್ತು, ಭಾಷಾ ಕೌಶಲ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುತ್ತದೆ ಎಂದು ಹೇಳಿದರು. ಯುವ ರಂಗ ನಿರ್ದೇಶಕ ಅನುರಾಗ್ ಭೀಮಸಂದ್ರ ಅವರ ರಂಗಸೇವೆಯನ್ನು ಶ್ಲಾಘಿಸಿದ ಅವರು, ಮುಂದಿನ ದಿನಗಳಲ್ಲಿ ಶಾಲೆಯ ಮಕ್ಕಳಿಗೆ ನಾಟಕ ತರಬೇತಿ ಹಾಗೂ ಪ್ರದರ್ಶನಗಳನ್ನು ನೀಡುವಂತೆ ಆಹ್ವಾನಿಸಿ ಪ್ರೋತ್ಸಾಹಿಸಿದರು.

ಕಾರ್ಯಕ್ರಮದಲ್ಲಿ ಲೀಲಾ ಎಂ. (ಸಂಗೀತ ಉಪಾಧ್ಯಾಯರು), ಸಲೀಂ ಖಾನ್ (ಸಾಮಾಜಿಕ ಯುವ ಹೋರಾಟಗಾರ ಹಾಗೂ ರಂಗಭೂಮಿ ಕಲಾವಿದ) ಹಾಗೂ ಶಿವರಾಜ್ (ಭಾರತ ಸೇವಾದಳ) ಉಪಸ್ಥಿತರಿದ್ದರು. ಆಂಗ್ಲ ಭಾಷಾ ಉಪಾಧ್ಯಾಯರಾದ ವಿಶ್ವನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.

ದೇಶದ ಪ್ರಗತಿಗೆ ಕ್ರೀಡೆ ಪೂರಕವಾಗಲಿ: ಕೇಂದ್ರ ಸಚಿವ ವಿ.ಸೋಮಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದಲ್ಲಿ ಆರು ದಿನಗಳಿಂದ ನಡೆದ ಯೋನೆಕ್ಸ್-ಸನ್‌ರೈಸ್ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಅಂಡರ್-11 ಮತ್ತು ಅಂಡರ್-13 ವಿಭಾಗಗಳ ಬ್ಯಾಡ್ಮಿಂಟನ್ ಪಂದ್ಯಾವಳಿ ಮುಕ್ತಾಯಗೊಂಡಿದ್ದು ಶನಿವಾರ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ವಿವಿಧ ವಿಭಾಗಗಳ ವಿಜೇತರಿಗೆ ಬಹುಮಾನ ವಿತರಿಸಿದರು.

ಬಾಲಕರ ಅಂಡರ್-11 ವಿಭಾಗದ ಸಿಂಗಲ್ಸ್‌ನಲ್ಲಿ ರಿಯಾನ್ಸ್ ರಿಷಿಕ್ ಸಾಯಿ ಯಗಂಟಿ ಪ್ರಥಮ, ಲಿತಿನ್ ಪಿ ದ್ವಿತೀಯ ಸ್ಥಾನ ಪಡೆದರೆ, ಡಬಲ್ಸ್‌ನಲ್ಲಿ ಅಥರ್ವಾ ಸಾಹು ಹಾಗೂ ರೆಯಾನ್ಸ್ ರಿಷಿಕ್ ಪ್ರಥಮ ಸ್ಥಾನ ಗಳಿಸಿದರು. ಇದೇ ವಿಭಾಗದ ಬಾಲಕಿಯರ ಸಿಂಗಲ್ಸ್‌ನಲ್ಲಿ ಜ್ಯೋತ್ಸ್ನಾ ವಿನೋದ್ ಪ್ರಥಮ, ಯುವಿಕ ತಮ್ಮಯ್ಯ ದ್ವಿತೀಯ ಸ್ಥಾನ ಪಡೆದರು. ಡಬಲ್ಸ್‌ನಲ್ಲಿ ಜ್ಯೋತ್ಸ್ನಾ ವಿನೋದ್, ಕೃಷಾ ಸಿಂಗ್‌ದೇವ್ ಪ್ರಥಮ, ಆರುಶಿ ವೈನವಿ, ಸ್ವರ ಎಸ್. ಭಾರದ್ವಜ್ ಗೆಲುವು ಪಡೆದರು.

ಬಾಲಕಿಯರ ಅಂಡರ್ 13ರಲ್ಲಿ ವಿಭಾಗದ ಸಿಂಗಲ್ಸ್‌ನಲ್ಲಿ ಸಿಹಿ ಆದರ್ಶ ಮೊದಲ, ಶಾನ್ವಿ ಪಿ.ಎನ್ ದ್ವಿತೀಯ ಸ್ಥಾನ ಹಾಗೂ ಡಬಲ್ಸ್‌ನಲ್ಲಿ ಶಾನ್ವಿ ಪಿ.ಎನ್, ಶಾಂಭವಿ ಶರ್ಮಾ ಪ್ರಥಮ, ಹೇಮಶ್ರೀ, ಸಿಹಿ ಆದರ್ಶ ದ್ವಿತೀಯ ಸ್ಥಾನ ಪಡೆದರು. ಬಾಲಕರ ಅಂಡರ್ 13 ವಿಭಾಗದ ಸಿಂಗಲ್ಸ್‌ನಲ್ಲಿ ವೈಭವ್ ರಾವ್ ನಂದಿಕೊಳ್ಳ ಮೊದಲ ಹಾಗೂ ಜ್ಞಾನ್ ರಿಷಿಕ್ ಬೊಲಿಗರ್ಲಾ ಎರಡನೇ ಸ್ಥಾನ ಗಳಿಸಿದರು. ಡಬಲ್ಸ್‌ನಲ್ಲಿ ಮಾನ್ವಿತ ಮಾಣಿಬೆಟ್ಟು, ಆದೇಶ್, ವೈಭವ್ ರಾವ್ ಮೊದಲ ಹಾಗೂ ಜ್ಞಾನ್ ರಿಷಿಕ್ ಬೋಲಿಗರ್ಲಾ, ಕೌಶಿಕ್ ಹಳೆಬೀಡು ದ್ವಿತೀಯ ಸ್ಥಾನ ಪಡೆದರು.

ಕೇಂದ್ರ ಸಚಿವ ವಿ. ಸೋಮಣ್ಣ ವಿಜೇತರಿಗೆ ಬಹುಮಾನ ವಿತರಿಸಿ, ದೇಶದ ಪ್ರಗತಿಗೆ, ಹಿರಿಮೆಗೆ ಕ್ರೀಡೆಯೂ ಪೂರಕವಾಗಿರಬೇಕು. ವಿಕಸಿತ ಭಾರತ 2047ರ ವೇಳೆಗೆ ಭಾರತದ ಕ್ರೀಡೆಗಳು ಉತ್ತುಂಗದಲ್ಲಿರಬೇಕು. ಅದಕ್ಕಾಗಿ ಈಗಿನಿಂದಲೇ ಯುವಕ್ರೀಡಾಪಟುಗಳು ಸಜ್ಜಾಗಬೇಕು. ಕ್ರೀಡಾಪ್ರತಿಭೆಗಳನ್ನು ಬೆಳಕಿಗೆ ತರಲು ಇಂತಹ ಪಂದ್ಯಾವಳಿಗಳು ಸಹಕಾರಿಯಾಗಬೇಕು. ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ತುಮಕೂರಿನಲ್ಲಿ ಪಂದ್ಯಾವಳಿ ಆಯೋಜಿಸಿದ್ದಕ್ಕೆ ಅಭಿನಂದನೆಗಳು ಎಂದರು. ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಅವರಲ್ಲಿ ಸ್ನೇಹ, ಆತ್ಮೀಯತೆ, ಕ್ರೀಡಾ ಮನೋಭಾವ, ಸಾಧಿಸುವ ಛಲ ಹೆಚ್ಚುತ್ತದೆ. ಕ್ರಿಕೆಟ್ ನಂತರ ಬ್ಯಾಡ್ಮಿಂಟ್ ಹೆಚ್ಚು ಜನಪ್ರಿಯ ಕ್ರೀಡೆಯಾಗಿದೆ. ದೇಶವಿದೇಶಗಳಲ್ಲಿ ಬ್ಯಾಡ್ಮಿಂಟನ್ ಪ್ರತಿಭೆಗಳು ಅಭ್ಯಾಸ ಮಾಡುತ್ತಿದ್ದಾರೆ. ರಾಜ್ಯದಲ್ಲೂ ಅತ್ಯುತ್ತಮ ಬ್ಯಾಡ್ಮಿಂಟನ್ ಆಟಗಾರರನ್ನು ತಯಾರು ಮಾಡಿ ರಾಷ್ಟ್ರೀಯ ಪಂದ್ಯಾವಳಿಗೆ ಸಜ್ಜುಗೊಳಿಸಲು ಅಸೋಸಿಯೇಷನ್ ಪ್ರಯತ್ನ ಮಾಡಲಿ ಎಂದು ಸಚಿವ ಸೋಮಣ್ಣ ಹೇಳಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್, ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್ ಹೆಬ್ಬಾಕ, ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ವಿ. ಮುರಳಿಧರ್, ತುಮಕೂರು ಬ್ಯಾಡ್ಮಿಂಟನ್ ಅಕಾಡೆಮಿ ಅಧ್ಯಕ್ಷ ಪಿ. ಪ್ರವೀಣ್, ರಾಜ್ಯ ಬ್ಯಾಡ್ಮಿಂಟನ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ವಿ. ಮುರಳಿಧರ್, ಮಲ್ಲಸಂದ್ರ ಶಿವಣ್ಣ, ಬ್ಯಾಟ ರಂಗೇಗೌಡ, ಚಂದ್ರಶೇಖರ ಬಾಬು, ರುದ್ರೇಶ್, ಲಕ್ಷ್ಮೀನಾರಾಯಣ ಮೊದಲಾದವರು ಭಾಗವಹಿಸಿದ್ದರು.

ದೇಶದ ಆರ್ಥಿಕ ಪ್ರಗತಿಗೆ ಯುವಶಕ್ತಿ ಕೊಡುಗೆ ಅಮೂಲ್ಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ದೇಶದ ನಾಗಲೋಟದ ಆರ್ಥಿಕ ಪ್ರಗತಿಗೆ ಯುವಶಕ್ತಿ ಕೊಡುಗೆ ಕಾರಣ ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀರಮಣ ಮಹರ್ಷಿ ಎಜುಕೇಷನ್ ಟ್ರಸ್ಟ್‌ನ ಸಹಯೋಗದಲ್ಲಿ ಶ್ರೀದೇವಿ ಪಿ.ಯು. ಕಾಲೇಜಿನ ವತಿಯಿಂದ "ಶ್ರೀಆರೋಹಿ" ಸ್ವಾಗತ ಸಮಾರಂಭವನ್ನು ಆ.1 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀದೇವಿ ಆಸ್ಪತ್ರೆ ಆಡಿಟೋರಿಯಂ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಉದ್ಘಾಟಿಸಿದ್ದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ಮಾತನಾಡುತ್ತಾ ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಎಲ್ಲಾ ವಲಯದಲ್ಲಿ ಅಸಾಧಾರಣ ಪ್ರಗತಿ ಸಾಧಿಸಿದೆ. ಇದರ ಫಲವಾಗಿ ವಿಶ್ವದ ನಾಲ್ಕನೇ ಆರ್ಥಿಕ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿದ್ದು ಮೂರನೇ ಸ್ಥಾನಕ್ಕೆ ದಾಪುಗಾಲಿಡುತ್ತಿದೆ. ಗುಣಮಟ್ಟದ ಶಿಕ್ಷಣಕ್ಕೆ ಶ್ರೀದೇವಿ ವಿದ್ಯಾಸಂಸ್ಥೆ ಮಹತ್ವ ನೀಡಿದೆ. ವಿದ್ಯಾರ್ಥಿಗಳ ಬೌದ್ಧಿಕ ವಿಕಸನಕ್ಕೆ ತಕ್ಕಂತೆ ಗ್ರಂಥಾಲಯ, ಕ್ರೀಡಾಂಗಣ ಮುಂತಾದ ವಿಶ್ವದರ್ಜೆಯ ಮೂಲ ಸೌಲಭ್ಯ, ಶೈಕ್ಷಣಿಕ ಪರಿಸರದ ವ್ಯವಸ್ಥೆ ಕಲ್ಪಿಸಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ನುರಿತ ಅಧ್ಯಾಪಕರ ತಂಡ ನಿಮ್ಮ ಭವಿಷ್ಯಕ್ಕೆ ಹೊಸ ದಾರಿ ತೋರಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್‌ರವರು ಮಾತನಾಡಿ, ಭವಿಷ್ಯ ರೂಪಿಸಿಕೊಳ್ಳಲು ಕನಸು ಕಾಣುವುದು ತಪ್ಪಲ್ಲ ಆದರೆ ಆ ಕನಸನ್ನು ನನಸು ಮಾಡಲು, ಗುರಿಮುಟ್ಟಲು ನಿರಂತರವಾಗಿ ಶ್ರಮ ಪಡಬೇಕು. ಇಲ್ಲದೆ ಹೋದರೆ ನಿಮ್ಮ ಕನಸಿಗೆ ಅರ್ಥ ಬರುವುದಿಲ್ಲ. ಕೇವಲ ಅಂಕಗಳಿಕೆಗೆ ಶಿಕ್ಷಣ ಮತ್ತು ಕಾಲೇಜಿನ ಗುರಿಯಲ್ಲ ಸಮಗ್ರ ಬೆಳವಣಿಗೆ, ವ್ಯಕ್ತಿತ್ವ ವಿಕಾಸಕ್ಕೆ ಶ್ರೀದೇವಿ ವಿದ್ಯಾಸಂಸ್ಥೆ ಪ್ರತಿ ಹಂತದಲ್ಲಿ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡಲಿದೆ. ಸವಾಲುಎದುರಿಸುವ, ಬದುಕು ಕಟ್ಟಿಕೊಳ್ಳುವ ಆತ್ಮವಿಶ್ವಾಸಕ್ಕೆ ನೀರೆಯುತ್ತೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಪಿ.ಯು.ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಅಜಯ್.ಸಿ.ರವರು ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಡಾ.ಲಾವಣ್ಯ, ಶ್ರೀದೇವಿ ಪಿ.ಯು.ಕಾಲೇಜಿನ ಡೀನ್ ಎ.ಕೆ.ಸಾಹ, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ. ನಾಗರಾಜ ಸೂರ್ಯದೇವರ ಹಾಗೂ ಶ್ರೀದೇವಿ ಪಿ.ಯು.ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅನಕ್ಷರತೆ, ಬಡತನ ಮಾನವ ಕಳ್ಳ ಸಾಗಣೆ ಜಾಲದಲ್ಲಿ ಸಿಲುಕಿಕೊಳ್ಳುವಂತೆ ಮಾಡುತ್ತದೆ



ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: 'ಅನಕ್ಷರತೆ, ಬಡತನವು ಮಾನವ ಕಳ್ಳ ಸಾಗಣೆಯ ಜಾಲದಲ್ಲಿ ಸಿಲುಕಿಕೊಳ್ಳುವಂತೆ ಮಾಡುತ್ತದೆ. ಈ ಜಾಲದಲ್ಲಿ ಒಮ್ಮೆ ಸಿಲುಕಿಕೊಂಡರೆ ಹೊರ ಬರುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯ ಇದೆ' ಎಂದು ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸುಮಂಗಲ.ಎಸ್. ಬಸವಣ್ಣೂರ್ ಹೇಳಿದರು.

ಶನಿವಾರದಂದು ಮದುಗಿರಿ ಪಟ್ಟಣದಲ್ಲಿರುವ ಸರ್ಕಾರಿ ಪ್ರೌಢಶಾಲೆ ಮುಂಭಾಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ "ಮಾನವ ಕಳ್ಳ ಸಾಗಣೆ ವಿರೋಧಿ ಜಾಥ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.. 'ಮಾನವ ಕಳ್ಳ ಸಾಗಣೆ ಪ್ರಕರಣಗಳು ಮೂಲಭೂತ ಹಕ್ಕುಗಳ ಉಲ್ಲಂ-ಘನೆಯಾಗಿದೆ. ಇಂತಹ ಅಪರಾಧ ಪ್ರಕರಣಗಳು ಘಟಿಸಿದ ನಂತರ ಕಾನೂನು ಕ್ರಮ ತೆಗೆದುಕೊಳ್ಳುವ ಬದಲು; ಪ್ರಕರಣಗಳು ಜರುಗದಂತೆ ಎಚ್ಚರಿಕೆವಹಿಸಬೇಕು' ಎಂದರು.

, 'ಮಕ್ಕಳ ಒತ್ತಾಯಪೂರ್ವಕ ಭಿಕ್ಷಾಟನೆ, ಜೀತ ಪದ್ಧತಿ, ಲೈಂಗಿಕ ಶೋಷಣೆ, ಬಾಲಕಾರ್ಮಿಕತೆ, ಅಂಗಾಂಗ ಕದಿಯುವುದು ಮಾನವ ಕಳ್ಳ ಸಾಗಣೆಗೆ ಪ್ರಮುಖ ಕಾರಣಗಳಾಗಿವೆ' ಎಂದರು. ವಕೀಲರ ಸಂಘದ ಅಧ್ಯಕ್ಷ ಎಂ. ಶಿವಣ್ಣ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಮೊಬೈಲ್ ದೂರವಾಣಿಗಳ ಮೂಲಕ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಬರುವ ಆಮಿಷಗಳಿಗೆ ಬಲಿಯಾಗುತ್ತಿರುವುದು ಕಂಡುಬರುತ್ತಿದ್ದು, ಇಂತಹ ಜಾಲತಾಣಗಳಲ್ಲಿ ಅಪರಿಚಿತರ ಜೊತೆ ಪರಿಚಯವಾಗಿ ಇಂತಹ ಕಳ್ಳ ಸಾಗಾಣಿಕೆಗಳು ನಡೆಯಲು ಕಾರಣವಾಗುತ್ತಿದೆ.ಅಂತಹ ಅನುಮಾನಗಳು ಬಂದಲ್ಲಿ ಪೋಷಕರಿಗೆ, ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ, ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮತ್ತು ಭವಿಷ್ಯ ಹಾಳು ಮಾಡಿಕೊಳ್ಳದಂತೆ ಎಚ್ಚರವಾಗಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಬಿ.ಎನ್ ಅಮರನಾಥ, ಅಧಿಕ ಸಿವಿಲ್ ನ್ಯಾಯಾಧೀಶರಾದ ಜೆ.ರೋಹಿಣಿ,, ವಕೀಲರ ಸಂಘದ ಉಪಾಧ್ಯಕ್ಷ ಅಶ್ವಥ್ ನಾರಾಯಣ, ಕಾರ್ಯದರ್ಶಿ ನರಸೇಗೌಡ, ಕಾಲೇಜಿನ ಉಪಪ್ರಾಂಶುಪಾಲ ವಿ. ರಾಜಣ್ಣ,, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಜಾತದಲ್ಲಿ ಭಾಗವಹಿಸಿದ್ದರು.

ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆಗೆ ಆನ್‌ಲೈನ್ ಅರ್ಜಿ ಆಹ್ವಾನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆಯಡಿ ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆ, ಹೋಟೆಲ್ ಉದ್ಯಮ(ಕ್ಯಾಟರಿಂಗ್), ಅಂಗಡಿ, ಟೈಲರಿಂಗ್, ಟ್ಯಾಕ್ಸಿ ಹಾಗೂ ಹಸು ಸಾಕಾಣಿಕೆಯಂತಹ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು ಒದಗಿಸಲು ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಆಯ್ಕೆಯಾದ ಫಲಾನುಭವಿಗಳಿಗೆ ಕನಿಷ್ಠ 1 ಲಕ್ಷ ರೂ. ಹಾಗೂ ಗರಿಷ್ಠ 2 ಲಕ್ಷ ರೂ.ಗಳ ಸಾಲ-ಸಹಾಯಧನ ನೀಡಲಾಗುವುದು. ಇದರಲ್ಲಿ ಶೇ.20ರಷ್ಟು ಸಬ್ಸಿಡಿ ಒಳಗೊಂಡಿರುತ್ತದೆ. ಉಳಿಕೆ ಶೇ. 80ರಷ್ಟು ಸಾಲದ ಮೊತ್ತಕ್ಕೆ ಶೇ. 4ರಷ್ಟು ಬಡ್ಡಿಯಂತೆ ಒಟ್ಟು 34 ಕಂತುಗಳಲ್ಲಿ ಸಾಲವನ್ನು ಮರು ಪಾವತಿಸಬೇಕು.ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, 18 ರಿಂದ 65 ವರ್ಷದೊಳಗಿನವರಾಗಿರಬೇಕು. ಚಾಲ್ತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದ ಪ್ರಮಾಣಪತ್ರ (ಇಘಖ ಪ್ರಮಾಣ ಪತ್ರ) ಹೊಂದಿರಬೇಕು. ಒಂದು ಕುಟುಂಬದಿಂದ ಒಬ್ಬರು ಮಾತ್ರ ಅರ್ಜಿ ಸಲ್ಲಿಸಬಹುದಾಗಿದ್ದು, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಸಾಲದ ಉದ್ದೇಶವನ್ನು 10 ಪದಗಳಿಗಿಂತ ಕಡಿಮೆ ಇಲ್ಲದಂತೆ, ಸ್ಪಷ್ಟವಾಗಿ ಆನ್ ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಅರ್ಜಿದಾರರ ಆಧಾರ್‌ಗೆ ಮೊಬೈಲ್ ಸಂಖ್ಯೆ ಲಿಂಕ್ ಆಗಿರಬೇಕು ಮತ್ತು ಬ್ಯಾಂಕ್ ಖಾತೆ **(NPCI gAr)** ಸೀಡ್ ಆಗಿರಬೇಕು. ಮಹಿಳೆಯರಿಗೆ ಶೇ.33ರಷ್ಟು ಹಾಗೂ ವಿಶೇಷಚೇತನರಿಗೆ ಶೇ.5ರಷ್ಟು ಮೀಸಲಾತಿಯನ್ನು ನೀಡಲಾಗುವುದು. ಅರ್ಜಿಯನ್ನು ವೆಬ್ ಸೈಟ್: **www.Ksbdb.karnataka.gov.in** ಮೂಲಕ ಆಗಸ್ಟ್ 31ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ: 8762249230ಯನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸೌಲಭ್ಯಗಳಿಗಾಗಿ ತೋಟಗಾರಿಕೆ ರೈತರಿಂದ ಅರ್ಜಿ ಆಹ್ವಾನ

ತುಮಕೂರು;ಜಿಲ್ಲೆಯ ಗುಬ್ಬಿ ತಾಲ್ಲೂಕು ತೋಟಗಾರಿಕೆ ಇಲಾಖೆ ವತಿಯಿಂದ 2026-27ನೇ ಸಾಲಿಗೆ ಅನುಷ್ಠಾನಗೊಳಿಸಲಾಗುತ್ತಿರುವ **VB- G RAM(G)** ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಹಾಗೂ ಸಹಾಯಧನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. **VB- G RAM(G)** ಯೋಜನೆಯಡಿ ತೆಂಗು, ಮಾವು, ಸಪೋಟ, ಸೀಬೆ, ನೇರಳೆ, ನಿಂಬೆ, ಹಲಸು, ಕಾಳುಮೆಣಸು, ಜಾಯಿಕಾಯಿ, ಏಲಕ್ಕಿ, ಹುಣಸೆ, ಗೇರು, ಕೋಕೋ, ತಾಳೆ, ಗುಲಾಬಿ ಹಾಗೂ ಇತರೆ ತೋಟಗಾರಿಕೆ ಬೆಳೆ(ಅಡಿಕೆ, ಬಾಳೆ, ಪಪಾಯ ಹೊರತುಪಡಿಸಿ)ಗಳ ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಕೂಲಿ ವೆಚ್ಚವನ್ನು ಪಾವತಿಸಲಾಗುವುದು. ಅಪ್ರಧಾನ ಹಣ್ಣುಗಳಾದ ಬೆಟ್ಟದ ನೆಲ್ಲಿ, ಬಾರೆ, ಅಂಜೂರ, ಕವಳೆ ಹಣ್ಣು, ಪ್ಯಾಶಾನ್ ಹಣ್ಣು, ನಕ್ಷತ್ರ ಹಣ್ಣು, ಹಲಸು, ನೇರಳೆ, ಬೆಣ್ಣೆ ಹಣ್ಣು, ಡ್ರಾಗನ್ ಹಣ್ಣು, ರಾಮ್ ಬೂಟನ್, ಪಾಲ್ಸ, ಸೀತಾಫಲ, ಅಮಟೆಕಾಯಿ, ಪನ್ನೇರಳೆ, ಮ್ಯಾಂಗೋಸ್ಟೀನ್, ದುರಿಯನ್, ಹುಣಸೆ, ಕಿರು ನೆಲ್ಲಿ, ಬೇಲದ ಹಣ್ಣು ಹಾಗೂ ಸಾಂಬಾರು ಬೆಳೆಗಳಾದ ಕಾಳು ಮೆಣಸು, ಜಾಯಿ ಕಾಯಿ, ಲವಂಗ, ದಾಲ್ಚಿನ್ನಿ, ಸರ್ವಸಾಂಬಾರ, ಏಲಕ್ಕಿ ಹಾಗೂ ಇತರೆ ತೋಟಗಾರಿಕೆ ಬೆಳೆಗಳಿಗೂ ಸದರಿ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿದೆ.ಈ ಯೋಜನೆಯಡಿ ಸಮಗ್ರ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಮಿಶ್ರ ಬೆಳೆ ಪದ್ಧತಿಗೆ ಆದ್ಯತೆ ನೀಡಲಾಗಿದೆ. ಅದರನ್ವಯ ತೆಂಗು ಹಾಗೂ ಅಡಿಕೆಯಲ್ಲಿ ಬೆಳೆಯಬಹುದಾದಂತಹ ತೋಟಗಾರಿಕೆ ಬೆಳೆಗಳಿಗೂ ಸಹ ಸೌಲಭ್ಯವನ್ನು ಒದಗಿಸಲಾಗುವುದು. ಅಲ್ಲದೆ, ಇಲಾಖಾ ವತಿಯಿಂದ ಹನಿ ನೀರಾವರಿ ಘಟಕ ಅಳವಡಿಸಿಕೊಂಡಲ್ಲಿ ನಿಯಮಾನುಸಾರ ಸಹಾಯಧನ ನೀಡಲಾಗುವುದು.ಆಸಕ್ತ ರೈತರು ಅರ್ಜಿಯೊಂದಿಗೆ ಚಾಲ್ತಿ ಪಹಣಿ, ಆಧಾರ್ ಕಾರ್ಡ್, ಕೂಲಿ ಕಾರ್ಡ್(ಎಠಭ ಛಿಚಿಡಿಜ), ಸಣ್ಣ ಹಿಡುವಳಿ ಪತ್ರ, ಬಿ.ಪಿ.ಎಲ್ ಕಾರ್ಡ್, ಜಾತಿ ಪ್ರಮಾಣ ಪತ್ರ(ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮಾತ್ರ), ಭಾವಚಿತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಲಗತ್ತಿಸಿ ಗುಬ್ಬಿ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ(ಜಿಪಂ) ಅಥವಾ ಸಂಬಂಧಿಸಿದ ಹೋಬಳಿ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಸಹಾಯಕ ತೋಟಗಾರಿಕೆ ಅಧಿಕಾರಿ ಹಾಗಲವಾಡಿ 8700480581, ಕಡಬ ಮತ್ತು ನಿಟ್ಟೂರು-9535376687, ಚೇಳೂರು-6362409080, ಕಸಬ ಮತ್ತು ಸಿ.ಎಸ್. ಪುರ-7259243329ನ್ನು ಸಂಪರ್ಕಿಸಬಹುದಾಗಿದೆ ಎಂದು ಗುಬ್ಬಿ ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಮನಗರ ವೃತ್ತಗಳಿಗೆ ಮಹನೀಯರ ಹೆಸರಿಡಲು ನಗರಸಭೆಯಲ್ಲಿ ನಿರ್ಣಯ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ನಗರದ ಪ್ರಮುಖ ರಸ್ತೆ, ವೃತ್ತಗಳಿಗೆ ಮಹನೀರಯು ಹೆಸರಿಡುವುದು, ಫುಡ್‌ಸ್ಟ್ರೀಟ್ ಮಳಿಗೆಗಳ ಮುಂಗಡ ಠೇವಣಿ ಮತ್ತು ಬಹಿರಂಗ ಹರಾಜು ಸೇರಿದಂತೆ ಇತರೆ ವಿಷಯಗಳಿಗೆ ಶನಿವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.



ನಗರದ ನಗರಸಭೆ ಫುಶಸ್ತಿ ಭವನದಲ್ಲಿ ಅಧ್ಯಕ್ಷ ಕೆ.ಶೇಷಾದ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಮನಗರದ ಪ್ರಮುಖ ರಸ್ತೆ, ವೃತ್ತಗಳಿಗೆ ಮಹನೀಯರ ಹೆಸರಿಡುವ ಬಗ್ಗೆ ಸಭೆಯಲ್ಲಿ ವಿಷಯ ಪ್ರಸ್ತಾಪಿಸಲಾಯಿತು. ಜತೆಗೆ ಬಿ.ಎಂ.ರಸ್ತೆಯಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಅಂಗಡಿಗಳಿಗೆ ಮುಂಗಡ ಠೇವಣಿ ಮತ್ತು ಬಹಿರಂಗ ಹರಾಜು ಮಾಡುವ ಬಗ್ಗೆ ಕೈಗೊಂಡ ನಿರ್ಣಯ ರಾಮನಗರದ 11 ಕರಗ ಮಹೋತ್ಸವಕ್ಕೆ 5 ಲಕ್ಷ ಅನುದಾನ ಘೋಷಣೆ ಮಾಡಲಾಯಿತು.

ವಾರ್ಡ್ ನಂ.27ರಲ್ಲಿ ವಿವೇಕಾನಂದ ಪ್ರತಿಮೆ ಉನ್ನತೀಕರಣಗೊಳಿಸಲು 7 ಲಕ್ಷ ವೆಚ್ಚ ಮಾಡುವ ಬಗ್ಗೆ ತೀರ್ಮಾನಿಸಲಾಯಿತು. ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ 41 ನೌಕರರಿಗೆ ಸರ್ಕಾರದ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಪರಿಷ್ಕರಣೆ, ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಈ ವಿಷಯಗಳ ಬಗ್ಗೆ ಸರ್ವಾನುಮತದಿಂದ ಸದಸ್ಯರು ಸಮ್ಮತಿ ಸೂಚಿಸಿ ನಗರಸಭೆ ಅಧ್ಯಕ್ಷರು ಮಂಡಿಸಿದ ನಿರ್ಣಯಕ್ಕೆ ಒಪ್ಪಿಗೆ ನೀಡಿದರು.

ಸಭೆಯಲ್ಲಿ ಜೆಡಿಎಸ್ ಸದಸ್ಯ ರಮೇಶ್ ಮಾತನಾಡಿ ಬಾಕಿ ನೀರಿನ ಬಿಲ್ 22 ಕೋಟಿ ಇದ್ದು ಈ ಹಣ ಮನ್ನಾ ಮಾಡುವುದರಿಂದ ಜನರಿಗೆ ಅನುಕೂಲವಾಗಲಿದೆ ಪಕ್ಕದ ಕನಕಪುರ ನಗರಸಭೆಯಲ್ಲಿ ನೀರಿನ ಬಾಕಿ ಬಿಲ್ ಮನ್ನಾ ಮಾಡಿದ್ದಾರೆ ಅದರಂತೆ ಇಲ್ಲಿಯೂ ಕೂಡ ಬಾಕಿ ಹಣ ಮನ್ನಾ ಮಾಡಬೇಕು ಎಂದು ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಅಧ್ಯಕ್ಷ ಕೆ. ಶೇಷಾದ್ರಿಅವರು ಉತ್ತರ ನೀಡಿ ಈಗಾಗಲೇ ನಾವು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಮತ್ತೆ ಕೂಡ ಸಲ್ಲಿಸೋಣ ಎಂದು ಉತ್ತರಿಸಿದರು.

ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ (ಶಶಿ) ಮಾತನಾಡಿ ರಾಮನಗರ ಪ್ರಮುಖ ರಸ್ತೆ, ವೃತ್ತಗಳಿಗೆ ಹಲವು ದಶಕಗಳಿಂದ ತಾಲ್ಲೂಕಿನಲ್ಲಿ ದುಡಿದ ಮತ್ತು ಹೆಸರುಗಳಿಸಿದ ಮಹನೀಯರ ಮತ್ತು ಆದರ್ಶಪುರುಷರ ಹೆಸರಿಡುವಂತೆ ಹಲವು ದಶಕಗಳಿಂದ ಸಾರ್ವಜನಿಕರ ಒತ್ತಾಯವಾಗಿತ್ತು. ಸರ್ವ ಜನರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಅವರ ಸ್ಮರಣೆ ಶಾಶ್ವತವಾಗಿರುವಂತೆ ಹೆಸರಿಡಲು ಇಂದಿನ ಸಭೆಯಲ್ಲಿ ಪ್ರಮುಖ ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆಗೆ ಕಳುಹಿಸಲಾಗುತ್ತದೆ. ಈ ನಿರ್ಣಯ ರಾಮನಗರ ನಗರಸಭೆಯಲ್ಲಿ ಪ್ರಮುಖ ಮೈಲಿಗಲ್ಲಾಗಿದೆ ಎಂದರು.

ಸಭೆಯಲ್ಲಿ ನಗರಸಭೆ ಆಯುಕ್ತ ಡಾ.ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಮಹಮ್ಮದ್ ಆರಿಫ್, ಸದಸ್ಯರಾದ ಪಾರ್ವತಮ್ಮ, ರಮೇಶ್, ವಿಜಯಕುಮಾರಿ, ಪವಿತ್ರ, ಸೋಮಶೇಖರ್, ಮಹಾಲಕ್ಷ್ಮೀ, ಅಕ್ಲೀಂ, ಮಂಜುಳಾ, ಪದ್ಮ, ಅಜ್ಮತ್, ನರಸಿಂಹ, ಮುತ್ತರಾಜು, ಆಯಿಷಾ ಬಾನು, ಬೈರೇಗೌಡ, ನಾಗಮ್ಮ, ಗೋವಿಂದರಾಜು, ಸಮದ್, ಮೊಹಿನ್ ಖುರೇಷಿ, ಮುನ್‌ಜಿಲ್ ಆಗಾ, ನಿಜಾಮುದ್ದೀನ್ ಷರೀಫ್, ಪೈರೋಜ್ ಪಾಷ, ಅನ್ನು ವಜೀರ್ ಸಾಬ್, ನಗರಸಭೆ ಅಧಿಕಾರಿಗಳಾದ ಸುಬ್ರಹ್ಮಣಿ, ನಿರ್ಮಲ, ರೇಖಾ, ನಟರಾಜೇಗೌಡ, ನಾಗರಾಜು, ಜಲಮಂಡಳಿ ಎಇಇ ಪುಟ್ಟಯ್ಯ ಮತ್ತಿತರರು ಇದ್ದರು.

ಮಹನೀಯರ ಹೆಸರು ಸರ್ಕಾರಕ್ಕೆ ಪ್ರಸ್ತಾವನೆ

ಐಜೂರು ವೃತ್ತಕ್ಕೆ ಶ್ರೀ ಜಗಜ್ಯೋತಿ ಬಸವೇಶ್ವರ ಹೆಸರು, ಆರ್‌ಎಂಸಿಆರ್ ಯಾರ್ಡ್ ವೃತ್ತಕ್ಕೆ ಹೆಚ್.ಡಿ.ದೇವೇಗೌಡ ವೃತ್ತ, ರೈಲ್ವೆ ಸ್ಟೇಷನ್‌ಗೆ ಟಿಪ್ಪು ಸುಲ್ತಾನ್, ಚರ್ಚ್ ಸರ್ಕಲ್ ಲೂರ್ದು ಮಾತೆ, ವಾಟರ್ ಟ್ಯಾಂಕ್ ಸರ್ಕಲ್‌ಗೆ ಡಾ. ಬಿ.ಆರ್. ಅಂಬೇಡ್ಕರ್, ಶಾಂತಿಲಾಲ್ ಲೇಔಟ್‌ಗೆ ಬಿಜಿಎಸ್ ಸರ್ಕಲ್, ರಾಯರದೊಡ್ಡಿ ಸರ್ಕಲ್‌ಗೆ ಛತ್ರಪತಿ ಶಿವಾಜಿ, ಜೈ ಭಾರತ್ ಟೆಂಟ್ ಸರ್ಕಲ್‌ಗೆ ಎಪಿಜೆ ಅಬ್ದುಲ್ ಕಲಾಂ, ಆಂಜನೇಯ ಆರ್ಚ್ ಸರ್ಕಲ್‌ಗೆ ಸಿ.ಎಂ ಲಿಂಗಪ್ಪ, ಬಿಳಗುಂಬ ವೃತ್ತಕ್ಕೆ ಮಂಜುನಾಥ ಸರ್ಕಲ್, ನೂರ್ ಸರ್ಕಲ್‌ಗೆ ನೂರಾಣಿ ಸರ್ಕಲ್, ಐಜೂರು ಭಾವನ ಆಸ್ಪತ್ರೆ ವೃತ್ತಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತ, ಶೋಭಾ ಹೋಟೆಲ್ ಸರ್ಕಲ್‌ಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ಕನಕಪುರ ವೃತ್ತಕ್ಕೆ ಭಕ್ತ ಕನಕದಾಸ ಸರ್ಕಲ್ ಸೇರಿದಂತೆ ಹಲವಾರು ರಸ್ತೆ ವೃತ್ತಗಳಿಗೆ ಹೆಸರುಗಳನ್ನು ಸಭೆಯಲ್ಲಿ ನಿರ್ಣಯಿಸಿ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಯಿತು.

ಬೇಡಿಕೆ ಮತ್ತು ಪೂರೈಕೆ ಹಿಲ್ಲೆಯಲ್ಲಿ ಜಲ್ಲಿ ಮತ್ತು ಕಲ್ಲಿನ ಉತ್ಪನ್ನಗಳ ಬೆಲೆ ಏರಿಕೆ

ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ : ಜಲ್ಲಿ ಮತ್ತು ಕಲ್ಲಿನ ಉತ್ಪನ್ನಗಳ ಬೆಲೆ ಏರಿಕೆಗೆ ಪ್ರಮುಖ ಕಾರಣ ಬೇಡಿಕೆ ಮತ್ತು ಪೂರೈಕೆಯ ಮೇಲೆ ಅವಲಂಭಿತವಾಗಿದೆ. ಆದರೆ ಲಾರಿ ಮಾಲೀಕರು ಏಕಾಏಕಿ ಕ್ರಷರ್ ಮಾಲೀಕರನ್ನು ಬೆಲೆ ಏರಿಕೆಯ ಸಂಬಂಧ ಕ್ರಷರ್ ಮಾಲೀಕರನ್ನು ದೂಷಿಸುವುದು ಒಳ್ಳೆಯದಲ್ಲ. ಬಹುತೇಕ ಎಲ್ಲಾ ಸಾಮಗ್ರಿಗಳು ಪ್ರತಿ ವರ್ಷ 31ರ ನಂತರ ಬೆಲೆ ಏರಿಕೆಯಾಗುತ್ತದೆ ಎಂದು ಕ್ರಷರ್ ಮಾಲೀಕ ತಮ್ಮನಾಯಕನಹಳ್ಳಿ ಗೋವಿಂದರಾಜ್ ತಿಳಿಸಿದರು.





ಅವರು ತಾಲ್ಲೂಕಿನ ಜಿಗಣಿಯಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಟಿಪ್ಪರ್ ಲಾರಿಗಳು ಮತ್ತು ಕ್ರಷರ್, ಕ್ವಾರೆ ಮಾಲೀಕರು ಉತ್ತಮ ಸಂಬಂಧ ಹೊಂದಿದ್ದಾರೆ. ಉದ್ಯಮ ಮಾಡಲು ಭಾರತ ಸಂವಿಧಾನ ಹಕ್ಕು ನೀಡಿದೆ. ಉದ್ಯಮಗಳನ್ನು ನಡೆಸಲು ಎಲ್ಲರಿಗೂ ಸಮಾನ ಅವಕಾಶವಿದೆ. ಆದರೆ ಲಾರಿ ಮತ್ತು ಟಿಪ್ಪರ್ ಮಾಲೀಕರು ತಾವು ಹೇಳಿದ ದರ ನಿಗದಿ ಮಾಡುವಂತೆ ತಿಳಿಸಿದ್ದಾರೆ. ಕ್ರಷರ್ ಮತ್ತು ಕ್ವಾರೆಗಳಲ್ಲಿನ ಬೇಡಿಕೆ ಮತ್ತು ಪೂರೈಕೆಯ ತಾಂತ್ರಿಕ ಕಾರಣಗಳಿಂದಾಗಿ ಜಲ್ಲಿ ಮತ್ತು ಕಲ್ಲಿನ ಉತ್ಪನ್ನಗಳ ಬೆಲೆ ಏರಿಕೆಯಾಗಿದೆ. ಲಾರಿ ಮತ್ತು ಟಿಪ್ಪರ್ ಲಾರಿಗಳು ಕ್ರಷರ್‌ಗಳೊಂದಿಗೆ ಉತ್ತಮ ಸಂಬಂಧ ಹೊಂದಿರಬೇಕು. 2016–17ನೇ ವರ್ಷಕ್ಕೆ ಜಲ್ಲಿ ಮತ್ತು ಪೂರೈಕೆಯ ಬೆಲೆ ಇಂದಿಗೂ ಪ್ರಸ್ತುತವಾಗಿದೆ. ಕ್ರಷರ್‌ಗಳು, ಟಿಪ್ಪರ್ ಲಾರಿಗಳು ಪ್ರತಿಭಟನೆ ನಡೆಸಲು ಮುಂದಾದರೆ ಮನೆ ಕಟ್ಟುವವರಿಗೆ ಸಮಸ್ಯೆಯಾಗುತ್ತದೆ. ಬೆಲೆ ಏರಿಕೆ ಮತ್ತು ಇಳಿಕೆಗೆ ಬೇಡಿಕೆ ಮತ್ತು ಪೂರೈಕೆಯ ಕಾರಣಗಳಿರುತ್ತದೆ. ವಿದ್ಯುತ್ ದರ ಏರಿಕೆಯಾಗಿದೆ, ಡಿಸೇಲ್ ದರ ಏರಿಕೆಯಾಗಿದೆ. ಕಬ್ಬಿಣ ಮ್ಯಾಂಗನೀಸ್ ಬೆಲೆ 50% ಏರಿಕೆಯಾಗಿದೆ. ಸರ್ಕಾರದ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ವಿಮೆ, ಕೂಲಿ ಸೇರಿದಂತೆ ವೆಚ್ಚದಲ್ಲಿಯೂ ಗಣನೀಯವಾಗಿ ಹೆಚ್ಚಾಗಿದೆ. ಹಾಗಾಗಿ ಜಲ್ಲಿ ಮತ್ತು ಕಲ್ಲಿನ ಉತ್ಪನ್ನಗಳ ಬೆಲೆ ಏರಿಕೆಯಾಗಿದೆ ಎಂದರು.

ಲಾರಿಗಳ ಅವೈಜ್ಞಾನಿಕ ಸಮಸ್ಯೆಗಳ ಬಗ್ಗೆ ಜೂನ್ 18ರಂದು ಲಾರಿ ಮತ್ತು ಟಿಪ್ಪರ್‌ಗಳ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ದೂರು ಸಲ್ಲಿಸಲಾಗಿದೆ. ಓವರ್ ಲೋಡ್, ಜಿಪಿಎಸ್ ಕ್ರಮ ಅನುಸರಿಸದೇ ಇರುವುದು ಮತ್ತು ಇದರಿಂದಾಗಿ ಸರ್ಕಾರಕ್ಕೆ ಪರ್ಮಿಟ್ ಸಮಸ್ಯೆಯಿಂದಾಗಿ ಸರ್ಕಾರಕ್ಕೆ ನಷ್ಟವಾಗಿದೆ. ಆರ್‌ಟಿಓ ಅಧಿಕಾರಿಗಳು ಗಣಿಗಳ ಹತ್ತಿರ ಬರುವ ಮುಂಚೆಯೇ ಇಲ್ಲಿನವರಿಗೆ ಮಾಹಿತಿ ದೊರೆಯುತ್ತದೆ. ಇದೊಂದು ದೊಡ್ಡ ಜಾಲವಾಗಿದೆ ಹಾಗಾಗಿ ಆರ್‌ಟಿಓ, ಗಣಿ ಇಲಾಖೆಯು ಲಾರಿ ಮತ್ತು ಟಿಪ್ಪರ್ ಲಾರಿಗಳ ಬಗ್ಗೆ ನಿಗಾ ವಹಿಸಬೇಕು. ಈ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರಕ್ಕೆ ದೂರು ನೀಡಲಾಗಿದೆ. ಇದರಿಂದಲೇ ಲಾರಿ ಮತ್ತು ಟಿಪ್ಪರ್ ಲಾರಿಗಳು ನಮ್ಮ ಮೇಲೆ ಪ್ರತಿಭಟನೆ ನಡೆಸುತ್ತಿವೆ. ಲಾರಿಗಳಿಗೆ ಜಿಪಿಎಸ್ ಅಳವಡಿಸುವುದು ಸರ್ಕಾರ ಕಡ್ಡಾಯಗೊಳಿಸಿದೆ. ಹಾಗಾಗಿ ನಿಯಮಗಳನ್ನು ಪಾಲಿಸುವುದರ ಬದಲು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚೇನ್ನಮ್ಮ ದೇವೇಗೌಡರ ನುಡಿನಮನ ಮತ್ತು ಗೀತಗಾಯನ ಕಾರ್ಯಕ್ರಮ



ಕನಕಪುರ: ಮಾಜಿ ಪ್ರಧಾನಮಂತ್ರಿ ಎಚ್ ಡಿ ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ದೇವೇಗೌಡರ ಜೀವನವು ಸರಳತೆ, ತ್ಯಾಗ, ಸಂಸ್ಕಾರ ಮತ್ತು ಕುಟುಂಬ ಮೌಲ್ಯಗಳ ಪ್ರತೀಕವಾಗಿತ್ತು. ಅವರು ಎಲೆಮರೆ ಕಾಯಿಯಂತೆ ಕುಟುಂಬದ ಬೆನ್ನೆಲುಬಾಗಿ ನಿಂತು ದೇವೇಗೌಡರ ಸಾರ್ವಜನಿಕ ಬದುಕಿಗೆ ಅಪಾರ ಶಕ್ತಿ ತುಂಬಿದ ಮಹಾನ್ ವ್ಯಕ್ತಿತ್ವ ಎಂದು ಮಳವಳ್ಳಿ ಮಾಜಿ ಶಾಸಕ ಅಂದಾನಿ ಹೇಳಿದರು.

ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಚೇನ್ನಮ್ಮ ದೇವೇಗೌಡರ ನುಡಿನಮನ ಮತ್ತು ಗೀತಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಧಿಕಾರದ ಉತ್ತುಂಗದಲ್ಲಿದ್ದರೂ ಚನ್ನಮ್ಮ ದೇವೇಗೌಡರು ಸರಳತೆಯನ್ನು ಎಂದಿಗೂ ಬಿಟ್ಟಿರಲಿಲ್ಲ. ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ, ಸಮಾಜಕ್ಕೆ ಆದರ್ಶವಾಗುವ ಜೀವನ ನಡೆಸಿದ ಅಪರೂಪದ ಮಹಿಳೆ ಎಂದು ಬಣ್ಣಿಸಿದರು.

ದೇವೇಗೌಡರ ರಾಜಕೀಯ ಜೀವನದ ಯಶಸ್ಸಿನ ಹಿಂದೆ ಚನ್ನಮ್ಮ ದೇವೇಗೌಡರ ತ್ಯಾಗ, ಸಹನೆ ಮತ್ತು ಪ್ರೋತ್ಸಾಹ ಪ್ರಮುಖ ಕಾರಣವಾಗಿತ್ತು. ಇಂತಹ ಆದರ್ಶ ವ್ಯಕ್ತಿತ್ವಗಳನ್ನು ನೆನಪಿಸಿಕೊಳ್ಳುವುದು ಸಮಾಜಕ್ಕೆ ಉತ್ತಮ ಮೌಲ್ಯಗಳನ್ನು ಸಾರುವ ಕಾರ್ಯವಾಗಿದೆ, ಯುವಜನತೆ ಅವರ ಬದುಕಿನಿಂದ ಪ್ರೇರಣೆ ಪಡೆದು ಕುಟುಂಬ, ಸಮಾಜ ಮತ್ತು ರಾಷ್ಟ್ರ ಸೇವೆಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಮಾಜಿ ಶಾಸಕ ವೈ ಎಸ್ ವಿ ದತ್ತ ಮಾತನಾಡಿ ಮಾಜಿ ಪ್ರಧಾನಮಂತ್ರಿ ಹೆಚ್ ಡಿ ದೇವೇಗೌಡ ಹಾಗೂ ದಿವಂಗತ ಶ್ರೀಮತಿ ಚನ್ನಮ್ಮ ದೇವೇಗೌಡರ ದಾಂಪತ್ಯ ಜೀವನವು ಇಂದಿನ ಸಮಾಜಕ್ಕೆ ಆದರ್ಶವಾಗಿದೆ. ಆ ದಿನಗಳಿಂದಲೂ ದೇವೇಗೌಡ ದಂಪತಿಗಳ ಪರಸ್ಪರ ಪ್ರೀತಿ, ವಿಶ್ವಾಸ, ಗೌರವ ಹಾಗೂ ಸರಳ ಜೀವನವನ್ನು ಹತ್ತಿರದಿಂದ ಕಂಡಿದ್ದೇನೆ. ದೇವೇಗೌಡರ ಕುಟುಂಬದೊಂದಿಗೆ ಹೊಂದಿದ್ದ ಆತ್ಮೀಯ ಸಂಬಂಧವನ್ನು ಸ್ಮರಿಸಿದರು. ಚನ್ನಮ್ಮ ದೇವೇಗೌಡರು ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ, ದೇವೇಗೌಡರ ಸಾರ್ವಜನಿಕ ಹಾಗೂ ರಾಜಕೀಯ ಜೀವನಕ್ಕೆ ಸದಾ ಬಲವಾಗಿ ನಿಂತ ಮಹಾನ್ ತ್ಯಾಗಿಯಾಗಿದ್ದರು, ಅವರ ಸಹನೆ ಮತ್ತು ಸೇವಾ ಮನೋ ಭಾವದಿಂದಲೇ ದೇವೇಗೌಡರು ರಾಷ್ಟ್ರ ರಾಜಕಾರಣದಲ್ಲಿ ಉನ್ನತ ಸ್ಥಾನಕ್ಕೇರಲು ಸಾಧ್ಯವಾಯಿತು .ಅವರಿಬ್ಬರ ನಡುವಿನ ಅಪಾರ ಪ್ರೀತಿ, ಬಾಂಧವ್ಯ ಮತ್ತು ಆತ್ಮೀಯತೆಗೆ ಸಾಕ್ಷಿಯಾಗಿದೆ. ಇಂತಹ ದಾಂಪತ್ಯ ಜೀವನ ಅಪರೂಪವಾಗಿದ್ದು, ಇಂದಿನ ಪೀಳಿಗೆಗೆ ಉತ್ತಮ ಮಾದರಿಯಾಗಿದೆ .ಚನ್ನಮ್ಮ ದೇವೇಗೌಡರ ಸರಳತೆ, ಮಾನವೀಯತೆ ಹಾಗೂ ಕುಟುಂಬ ಮೌಲ್ಯಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಳ್ಳಿಗಳಿಂದ ಯಾವುದೇ ಕೆಲಸಕ್ಕಾಗಿ ಬೆಂಗಳೂರಿಗೆ ಅಥವಾ ದೇವೇಗೌಡರ ನಿವಾಸಕ್ಕೆ ಬರುವ ಜನರನ್ನು ಅವರು ತಮ್ಮ ಮನೆಯವರಂತೆ ಆತ್ಮೀಯವಾಗಿ ಸ್ವಾಗತಿಸಿ, ಅವರಿಗೆ ಊಟ, ವಸತಿ ಸೇರಿದಂತೆ ಅಗತ್ಯ ನೆರವು ನೀಡುತ್ತಿದ್ದರು. ಅವರ ಸೇವಾ ಮನೋಭಾವ, ವಿನಯ ಮತ್ತು ಮಾನವೀಯತೆ ಇಂದಿಗೂ ಜನರ ಹೃದಯದಲ್ಲಿ ಅಚ್ಚಳಿಯದೆ ಉಳಿದಿದೆ ಎಂದು ಹೇಳಿದರು. ಚನ್ನಮ್ಮ ದೇವೇಗೌಡರು ಸುಮಾರು 72 ವರ್ಷಗಳ ಕಾಲ ದೇವೇಗೌಡರೊಂದಿಗೆ ಆದರ್ಶ ದಾಂಪತ್ಯ ಜೀವನ ನಡೆಸಿದರು. ಸುಖ–ದುಃಖಗಳಲ್ಲಿ ಸಮಾನವಾಗಿ ಜೊತೆಯಾಗಿ ನಿಂತು ದೇವೇಗೌಡರ ಸಾರ್ವಜನಿಕ ಬದುಕಿಗೆ ಭದ್ರ ಬುನಾದಿಯಾದರು. ಅವರಿಬ್ಬರ ಪ್ರೀತಿ, ವಿಶ್ವಾಸ ಮತ್ತು ಬಾಂಧವ್ಯ ಇಂದಿನ ಪೀಳಿಗೆಗೆ ಆದರ್ಶವಾಗಿದೆ ಎಂದು ಹೇಳಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಂಡೀಸ್ ಎನ್ನುವ ಹೆಪಟೈಟಿಸ್ ಅಲಕ್ಷ್ಯದಿಂದ ಸೀರೋಸಿಸ್, ಕ್ಯಾನ್ಸರ್‌ನ ಅಪಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಜನರ ಮಾತಿನಲ್ಲಿ ಜಾಂಡೀಸ್ ಎಂದು ಕರೆಯಲಾಗುವ ಹೆಪಟೈಟಿಸ್ ಕಾಯಿಲೆ ಬಗ್ಗೆ ಅಸಡ್ಡೆ ತೋರಿದರೆ ಅದು ಸೀರೋಸಿಸ್ ಮಾತ್ರವಲ್ಲದೆ ಕ್ಯಾನ್ಸರ್‌ಗೂ ಎಡೆ ಮಾಡಿ ಕೊಡಬಹುದು" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಎಲ್. ಹರೇಂದ್ರ ಕುಮಾರ್‌ರವರು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಆಸ್ಪತ್ರೆಯ ಜೀವಶಾಸ್ತ್ರ ವಿಭಾಗವು 'ವಿಶ್ವ ಹೆಪಟೈಟಿಸ್ ದಿನಾಚರಣೆ' ಅಂಗವಾಗಿ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಹೆಪಟೈಟಿಸ್ ಕಾಯಿಲೆಯು ಮೂಲತಃ ವೈರಾಣುಗಳಿಂದ ತಲೆ ದೋರುವ ಅನಾರೋಗ್ಯವಾಗಿದ್ದು, ಲಿವರ್‌ನಲ್ಲಿ (ಯಕೃತ್ತಿನ) ಉರಿಯೂತಕ್ಕೆ ಕಾರಣವಾಗುತ್ತದೆ. ಹೈಪಟೈಟಿಸ್ ಎ, ಬಿ, ಸಿ, ಡಿ ಮತ್ತು ಇ ಎಂಬ ಐದು ವಿಧಗಳು ಇದರಲ್ಲಿದ್ದು, ಬಿ ಮತ್ತು ಸಿ ಅತ್ಯಂತ ಅಪಾಯ ಕಾರಿಯಾಗಿರುತ್ತವೆ. ಸಕಾಲದಲ್ಲಿ ರೋಗ ನಿರ್ಣಯ ಹಾಗೂ ಯೋಜಿತ ಚಿಕಿತ್ಸೆಯಿಂದ ಹೆಪಾಟೈಟಿಸ್‌ಅನ್ನು ಗುಣಪಡಿಸಲು ಸಾಧ್ಯವಾಗುತ್ತದೆ. ತಾಯಿಯಿಂದ ಮಗುವಿಗೆ ಈ ಕಾಯಿಲೆ ವರ್ಗಾವಣೆಯಾಗಬಹುದು. ಹೈಪಟೈಟಿಸ್‌ಗೆ ಒಳಗಾದವರ ರಕ್ತದ ಸೋಂಕಿನಿಂದಲೂ ಈ ಕಾಯಿಲೆ ಹರಡುತ್ತದೆ" ಎಂದು ಹೇಳಿದರು.

ಅಮೆರಿಕದ ವೈದ್ಯವಿಜ್ಞಾನಿ ಬರೂಕ್ ಸ್ಯಾಮ್ಯುಯೆಲ್ ಬ್ಲುಮ್‌ಬರ್ಗ್ ಅವರು ಹೈಪಟೈಟಿಸ್–ಬಿ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದರಿಂದಾಗಿ, ಇದರ ದುಷ್ಪರಿಣಾಮಗಳು ಜಗತ್ತಿಗೆ ತಿಳಿಯುವಂತಾಯಿತು. ಇದೇ ಕಾರಣ್ಕಾಗಿ ಬ್ಲುಮ್‌ಬರ್ಗ್ ಅವರಿಗೆ 1976ರ ವೈದ್ಯಕೀಯ ನೊಬೈಲ್ ಪುರಸ್ಕಾರ ಸಂದಿತು ಎಂದು ಹರೇಂದ್ರಕುಮಾರ್ ತಿಳಿಸಿದರು. ಹೈಪಟೈಟಿಸ್–ಬಿ ಕಾಯಿಲೆಯ ಚಿಕಿತ್ಸೆಯಲ್ಲಿ ಮಹತ್ವದ ಪಾತ್ರವಹಿಸುತ್ತಿರುವ ವಾಕ್ಸಿನ್‌ಅನ್ನು ಬರೂಕ್ ಸ್ಯಾಮ್ಯುಯೆಲ್ ಸಂಶೋಧಿಸಿದ್ದಾರೆ. ಅದರ ಉಪಯೋಗ ಈಗ ಹೆಚ್ಚಿನ ಪ್ರಮಾಣದಲ್ಲಿದೆ.

ಹೆಪಟೈಟಿಸ್ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸುವ ದಿಸೆಯಲ್ಲಿ ಪ್ರಸಕ್ತ ವರ್ಷದ 'ವಿಶ್ವ ಹೆಪಟೈಟಿಸ್ ದಿನಾಚರಣೆ'ಯನ್ನು 'ಹೆಪಟೈಟಿಸ್–ಲೆಟ್ಸ್ ಬ್ರೇಕ್ ಇಟ್‌ಡೌನ್' ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. "ಹೆಪಟೈಟಿಸ್ ರೋಗವನ್ನು ತಡೆಗಟ್ಟೋಣ ಹಾಗೂ ಈ ಸಂಬಂಧ ಸಮಾಜದಲ್ಲಿ ಬೇರುಬಿಟ್ಟಿರುವ ಅಡೆತಡೆಗಳನ್ನು ನಿರ್ಮೂಲನೆ ಮಾಡೋಣ" ಎಂಬುದು ಈ ಧ್ಯೇಯವಾಕ್ಯದ ಅರ್ಥವಾಗಿದೆ ಎಂದರು.

ಕಾರ್ಯಕ್ರಮದ ಭಾಗವಾಗಿ ಇಡೀ ದಿನ ವಿಚಾರಗೋಷ್ಠಿಗಳನ್ನು ನಡೆಸಲಾಯಿತು. ಶ್ರೀದೇವಿ ಆಸ್ಪತ್ರೆಯ ಸಮುದಾಯ ವೈದ್ಯಕೀಯ ವಿಭಾಗದಡಾ. ಕುಸುಮಾ ಅವರು 2030ರ ವೇಳೆಗೆ ಭಾರತದಿಂದ ಹೆಪಟೈಟಿಸ್ ನಿರ್ಮೂಲನೆ ಮಾಡುವ ಗುರಿಯೊಂದಿಗೆ ರೂಪಿಸಲಾಗಿರುವ ಮಾರ್ಗಸೂಚಿಗಳ ಕುರಿತು ಮಾತನಾಡಿದರು.

ಜೆ.ಎಸ್.ಎಸ್. ಮೈಸೂರಿನ ವೈದ್ಯಕೀಯ ಕಾಲೇಜಿನಜೀವ ವಿಜ್ಞಾನ ಪ್ರಾಧ್ಯಾಪಕಿ ಡಾ.ಎಂ. ಎನ್.ಸುಮನಾ ಅವರು, ಹೆಪಟೈಟಿಸ್ ರೋಗ ನಿರ್ಣಯಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಪ್ರಗತಿ ಮತ್ತು ಪ್ರಯೋಗಾಲಯದ ಮಹತ್ವ ಕುರಿತು ವಿಷಯ ಮಂಡಿಸಿದರು.

ಶ್ರೀದೇವಿ ಆಸ್ಪತ್ರೆಯ ಗ್ಯಾಸ್ಟ್ರೋಎಂಟ್ರಾಲಜಿ ಮತ್ತು ಎಪಿಟಮಾಲಜಿ ಪ್ರಾಧ್ಯಾಪಕ ಡಾ. ಮನೋಹರ್ ಅವರು, ವೈರಲ್ ಹೆಪಟೈಟಿಸ್ ಕಾರ್ಯವಿಧಾನದ ಪ್ರಾತಿನಿಧಿಕ ಕ್ಲಿನಿಕಲ್ ಸನ್ನಿವೇಶ ಮತ್ತು ರೋಗಿಗಳ ಮೌಲ್ಯಮಾಪನ ಮಾಡುವ ವ್ಯವಸ್ಥಿತ ವಿಧಾನಗಳ ಬಗ್ಗೆ ತಿಳಿಸಿದರು.

ಮಣಿಪಾಲ್ ಆಸ್ಪತ್ರೆಯ ಮಕ್ಕಳ ಗ್ಯಾಸ್ಟ್ರೋಎಂಟರಾಲಜಿಸ್ಟ್ ಡಾ. ಕೆ.ಜಯಲಕ್ಷ್ಮಿ ಅವರು, ಮಕ್ಕಳಲ್ಲಿ ವೈರಸ್ ಹೆಪಟೈಟಿಸ್ ರೋಗ ನಿರ್ಣಯ ಮತ್ತು ಅದರ ನಿರ್ವಹಣೆಯ ಕಾರ್ಯವಿಧಾನಗಳನ್ನು ಕ್ಲಿನಿಕಲ್ ಉದಾಹರಣೆಯೊಂದಿಗೆ ವಿವರಿಸಿದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿಅವರು ಗರ್ಭಾವಸ್ಥೆಯಲ್ಲಿ ಹೆಪಟೈಟಿಸ್ ತಪಾಸಣೆಯ ಪ್ರಾಮುಖ್ಯ ಮತ್ತು ಅದರ ನಿರ್ವಹಣೆ ಕುರಿತು ಪ್ರಸ್ತುತಿ ಪಡಿಸಿದರು.

ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯ ಡಾ.ಜಗದೀಶ ಕೃಷ್ಣಮೂರ್ತಿ ಅವರು, ಹೆಪಟೈಟಿಸ್ ಬಿ ಮತ್ತು ಸಿ ಚಿಕಿತ್ಸೆಗೆ ಪ್ರಸ್ತುತ ಅಳವಡಿಸಿಕೊಂಡಿರುವ ತಂತ್ರಗಳು, ಆಂಟಿವೈರಲ್ ಚಿಕಿತ್ಸೆ, ರೋಗಿಯ ಆಯ್ಕೆ, ಚಿಕಿತ್ಸೆಯ ಮೇಲ್ವಿಚಾರಣೆ ಮತ್ತು ದೀರ್ಘಕಾಲದ ಅನುಸರಣೆ ಬಗ್ಗೆ ತಿಳಿಸಿದರು.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಯ ರಾಷ್ಟ್ರೀಯ ವೈರಲ್ ಹೆಪಟೈಟಿಸ್ ನಿಯಂತ್ರಣದ ನೋಡಲ್ ಅಧಿಕಾರಿ ಡಾ. ಎಂ.ಎಸ್. ಸತ್ಯನಾರಾಯಣ್ ಅವರು, ವೈರಲ್ ಹೆಪಟೈಟಿಸ್‌ನಲ್ಲಿರುವ ಸವಾಲುಗಳು, ಔಷಧ ನಿರೋಧಕತೆ, ಸೋಂಕು, ಭವಿಷ್ಯದ ಲಸಿಕೆ, ಚಿಕಿತ್ಸಾಕೌಶಲ್ಯ ಮತ್ತು ಸಂಶೋಧನೆಯ ಅಗತ್ಯ ಕುರಿತು ಮಾತನಾಡಿದರು.

ಶ್ರೀದೇವಿ ಆಸ್ಪತ್ರೆಯ ಸೂಕ್ಷ್ಮಶಾಸ್ತ್ರ ವಿಭಾಗದ ಅಧ್ಯಕ್ಷರಾದ ಡಾ.ಕೆ.ಸೌಮ್ಯ ಅವರು, ಜುಲೈ 28ರ ವಿಶ್ವ ಹೆಪಟೈಟಿಸ್ ದಿನಾಚರಣೆಯ ಮಹತ್ವ, ನೊಬೆಲ್ ಪ್ರಶಸ್ತಿ ಪುರಸ್ಕೃತ ಸ್ಯಾಮ್ಯುಯೆಲ್ ಬ್ಲುಮ್‌ಬರ್ಗ್ ಅವರ ವ್ಯಕ್ತಿತ್ವ ಹಾಗೂ ಕೊಡುಗೆ, ರೋಗ ತಡೆಗಟ್ಟುವಿಕೆ ಕುರಿತು ವಿಸ್ತೃತ ಮಾಹಿತಿ ನೀಡಿದರು. ಶ್ರೀದೇವಿ ವೈದ್ಯಕೀಯಅಧೀಕ್ಷಕ ಡಾ.ಮೋಹನ್‌ಕುಮಾರ್ ಕೆ, ಸಂಘಟನಾ ಕಾರ್ಯದರ್ಶಿ ಡಾ.ರೂಪಶ್ರೀ ಹಾಗೂ 250ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎನ್‌ಸಿಸಿ ಕೆಡೆಟ್ ಗಳಿಂದ ಸ್ವಚತಾ ಕಾರ್ಯ

ಸೂರ್ಯಪ್ರಗತಿನ್ಯೂಸ್.ಕಾಂ

ಕನಕಪುರ: ನಗರದ ರೂರಲ್ ಕಾಲೇಜ್'ನ ಎನ್‌ಸಿಸಿ ಘಟಕದ ವತಿಯಿಂದ "ಸಶಕ್ತ ಭಾರತ ರಾಷ್ಟ್ರ ಗೌರವ, ದೇಶಭಕ್ತಿ, ರಾಷ್ಟ್ರೀಯತೆ, ಯುವ ಸೇತು" ಎಂಬ ಧ್ಯೇಯ ದಡಿ ಪ್ರತಿಮೆ ಸ್ವಚ್ಛತಾ ಕಾರ್ಯಕ್ರಮ ಮತ್ತು ದೇಶಭಕ್ತಿ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.


ಸಾರ್ವಜನಿಕ ಸ್ಮಾರಕಗಳು ಮತ್ತು ರಾಷ್ಟ್ರೀಯ ಚಿಹ್ನೆಗಳ ನಿರ್ವಹಣೆಯನ್ನು ಪ್ರೋತ್ಸಾಹಿಸುವ ಎನ್‌ಸಿಸಿಯ ಉಪಕ್ರಮಗಳಿಗೆ ಅನುಗುಣವಾಗಿ ಸ್ವಚ್ಛತೆ ಹಾಗೂ ರಾಷ್ಟ್ರೀಯ ಐಕ್ಯತೆಯ ಮೌಲ್ಯಗಳನ್ನು ಉತ್ತೇಜಿಸುವುದು; ಜೊತೆಗೆ ಕೆಡೆಟ್‌ಗಳಲ್ಲಿ ದೇಶಭಕ್ತಿ, ನಾಗರಿಕ ಜವಾಬ್ದಾರಿ ಮತ್ತು ರಾಷ್ಟ್ರದ ಪರಂಪರೆಯ ಬಗೆಗಿನ ಗೌರವಭಾವನೆ ಯನ್ನು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ ವಾಗಿತ್ತು. ಕ್ಯಾಪ್ಟನ್ ವಿಜೇಂದ್ರ ಎಂ. ಜೆ. ಮತ್ತು ಸಿಟಿಓ (ಅಖಿಔ) ಡಾ. ಹನುಮಂತರಾಜು ಆರ್. ಅವರ ಮಾರ್ಗದರ್ಶನದಲ್ಲಿ ಒಟ್ಟು 64 ಎನ್‌ಸಿಸಿ ಕೆಡೆಟ್‌ಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಗರದಲ್ಲಿರುವ ಪ್ರಮುಖ ಸಾರ್ವಜನಿಕ ಸ್ಮಾರಕಗಳಾದ ಮಹಾತ್ಮ ಗಾಂಧಿಯವರ ಪ್ರತಿಮೆ, ಚನ್ನಬಸಪ್ಪ ವೃತ್ತದಲ್ಲಿರುವ ಅಶೋಕ ಸ್ತಂಭ, ಕೆರಳಾಳುಸಂದ್ರ ವೃತ್ತದಲ್ಲಿರುವ ಕನ್ನಡ ರಾಜ್ಯೋತ್ಸವ ಧ್ವಜ ಸ್ತಂಭದ ವೇದಿಕೆಯನ್ನು ಸ್ವಚ್ಛಗೊಳಿಸುವ ಮೂಲಕ ಚಟುವಟಿಕೆಯನ್ನು ಆರಂಭಿಸಲಾಯಿತು,,ಕೆಡೆಟ್‌ಗಳು ಪ್ರತಿಮೆಗಳು ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶ ಗಳನ್ನು ಸ್ವಚ್ಛಗೊಳಿಸಿ ಧೂಳು ಹಾಗೂ ಕಸವನ್ನು ತೆಗೆದು ಹಾಕಿದರು ಅಲ್ಲದೆ ಈ ಪ್ರಮುಖ ಸಾರ್ವಜನಿಕ ಸ್ಮಾರಕ ಗಳನ್ನು ಘನತೆ ಮತ್ತು ಗೌರವದಿಂದ ನಿರ್ವಹಿಸಲಾಗು ವಂತೆ ನೋಡಿಕೊಂಡರು.

ಸಮಾಜಕ್ಕೆ ಸಮರ್ಪಣಾಭಾವದಿಂದ ಸೇವೆ ಸಲ್ಲಿಸುವು ದನ್ನು ಮುಂದುವರಿಸಲು ಮತ್ತು ರಾಷ್ಟ್ರೀಯ ಏಕೀಕರಣ ಮತ್ತು ಸಮುದಾಯ ಕಲ್ಯಾಣವನ್ನು ಬಲಪಡಿಸುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ಎಲ್ಲಾ ಕೆಡೆಟ್‌ಗಳು ಈ ವೇಳೆ ಪ್ರತಿಜ್ಞೆಯನ್ನು ಮಾಡಿದರು.

ಇಂದು ಯೋಗಿನಾರೇಯಣ ಯತೀಂದ್ರರ ಮಹೋತ್ಸವ

ತುಮಕೂರು : ಜಿಲ್ಲಾ ಬಲಿಜ ಸಂಘ ಹಾಗೂ ಶ್ರೀ ಯೋಗಿನಾರೇಯಣ ಸೇವಾ ಸಮಿತಿ ವತಿಯಿಂದ ಶ್ರೀ ಯೋಗಿನಾರೇಯಣ ಯತೀಂದ್ರರ 191ನೇ ವರ್ಷದ ಜೀವ ಸಮಾಧಿ ಮಹೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಆಗಸ್ಟ್ 2 ರಂದು ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಜೆ.ಸಿ.ರಸ್ತೆಯ ವಿನಾಯಕ ನಗರದ ಶ್ರೀ ಸಿದ್ಧಿವಿನಾಯಕ ಸಮುದಾಯ ಭವನದಲ್ಲಿ (ಗಣಪತಿ ಪೆಂಡಾಲ್) ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಬಲಿಜ ಸಂಘದ ಅಧ್ಯಕ್ಷ ಟಿ.ಆರ್. ಅಂಜನಪ್ಪ ವಹಿಸಲಿದ್ದಾರೆ. ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರು ಹಾಗೂ ಎಂ.ಎಸ್. ರಾಮಯ್ಯ ವಿದ್ಯಾ ಸಂಸ್ಥೆಗಳ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಭಾಗವಹಿಸಲಿದ್ದಾರೆ.



ತುಮಕೂರು ನಗರದ ಹನುಮಂತಪುರದ ಶ್ರೀ ಪೇಟೆ ಕೋಲ್ಲಾಪುರದಮ್ಮ ಜಾತ್ರಾ ಮಹೋತ್ಸವದ ಮುನ್ನಾ ದಿನ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಆಗಮಿಸಿ ದೇವಿಯ ದರ್ಶನ ಪಡೆದರು. ದೇವಾಲಯದ ವತಿಯಿಂದ ಅವರನ್ನು ಅಭಿನಂದಿಸಲಾಯಿತು. ಯಜಮಾನರಾದ ಹನುಮಂತರಾಜು, ಟಿ.ಎಲ್.ಕುಂಭಯ್ಯ, ಎನ್. ಎಸ್.ಶಿವಣ್ಣ, ಮಾಜಿ ಉಪಮೇಯರ್ ಟಿ.ಕೆ.ನರಸಿಂಹಮೂರ್ತಿ, ರವೀಶ್ ಜಹಾಂಗೀರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹೆಬ್ಬಾಕ ರವಿಶಂಕರ್ ಹಾಗೂ ದೇವಸ್ಥಾನದ ಮುಖಂಡರುಗಳು ಭಕ್ತ ವೃಂದದವರು ಉಪಸ್ಥಿತರಿದ್ದರು.

ಕಾಲೇಜು ವಿದ್ಯಾರ್ಥಿಗಳಲ್ಲಿ 7 ಸಾವಿರ ಹೆಚ್‌ಐವಿ ಸೋಂಕು ವದಂತಿ ಸುಳ್ಳು

ಸೂರ್ಯಪ್ರಗತಿನ್ಯೂಸ್.ಕಾಂ

ರಾಜ್ಯದಲ್ಲಿ ಹೆಚ್‌ಐವಿ ಸೋಂಕಿನ ಬಗ್ಗೆ ಹರಡಿದ್ದ ವದಂತಿಗಳನ್ನು ಆರೋಗ್ಯ ಇಲಾಖೆ ತಳ್ಳಿಹಾಕಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಕಡ್ಡಾಯ ಪರೀಕ್ಷೆ ಇಲ್ಲ, 7,000 ಸೋಂಕಿತರ ಸುದ್ದಿ ಸುಳ್ಳು ಎಂದು ಸಚಿವ ಯುಟಿ ಖಾದರ್ ಸ್ಪಷ್ಟಪಡಿಸಿದ್ದಾರೆ. ಗರ್ಭಿಣಿಯರು ಮತ್ತು ರಕ್ತದಾನಿಗಳಿಗೆ ಮಾತ್ರ ಪರೀಕ್ಷೆ. 56,000 ಸೋಂಕಿತರು ಚಿಕಿತ್ಸೆಯಿಂದ ಹೊರಗುಳಿದಿದ್ದು, ಅವರನ್ನು ಪತ್ತೆಹಚ್ಚುವ ಪ್ರಯತ್ನ ನಡೆಯುತ್ತಿದೆ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು.



ರಾಜ್ಯದಲ್ಲಿ ಹೆಚ್‌ಐವಿ ಸೋಂಕಿನ ಸ್ಥಿತಿಗತಿ ಹಾಗೂ ಇತ್ತೀಚೆಗೆ ಹರಿದಾಡುತ್ತಿದ್ದ ವಿವಿಧ ವದಂತಿಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸುದ್ದಿಗೋಷ್ಠಿ ನಡೆಸಿ ಅಧಿಕೃತ ವಿವರಣೆ ಹಾಗೂ ಸ್ಪಷ್ಟನೆ ನೀಡಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಭಾರಿ ಪ್ರಮಾಣದಲ್ಲಿ ಸೋಂಕು ಹರಡಿದೆ ಹಾಗೂ ಕಡ್ಡಾಯ ಪರೀಕ್ಷೆ ಮಾಡಲಾಗುತ್ತಿದೆ ಎಂಬ ಸುದ್ದಿಗಳು ಸಂಪೂರ್ಣ ಸುಳ್ಳು ಎಂದು ಆರೋಗ್ಯ ಸಚಿವ ಯುಟಿ ಖಾದರ್ ಅವರು ಸ್ಪಷ್ಟಪಡಿಸಿದೆ.

ರಾಜ್ಯದ ಕಾಲೇಜು ವಿದ್ಯಾರ್ಥಿಗಳಲ್ಲಿ 7,000 ಜನರಿಗೆ ಹೆಚ್‌ಐವಿ ಸೋಂಕು ತಗಲಿದೆ ಎಂದು ಹರಡುತ್ತಿರುವ ಸುದ್ದಿ ಸುಳ್ಳು. ಶಾಲಾ–ಕಾಲೇಜುಗಳಲ್ಲಿ ಹೆಚ್‌ಐವಿ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಬೇಕು ಎಂಬ ನಿಯಮವಿಲ್ಲ. ಶಾಲಾ–ಕಾಲೇಜುಗಳಲ್ಲಿ ಕೇವಲ ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾತ್ರ ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಯಾವುದೇ ಸಾಮಾನ್ಯ ವ್ಯಕ್ತಿಗೆ ಹೆಚ್‌ಐವಿ ಪರೀಕ್ಷೆಯನ್ನು ಕಡ್ಡಾಯಗೊಳಿಸಿಲ್ಲ.

ಪ್ರಸ್ತುತ ಮುಖ್ಯವಾಗಿ ಎರಡು ಸಂದರ್ಭಗಳಲ್ಲಿ ಮಾತ್ರ ಹೆಚ್‌ಐವಿ ಪರೀಕ್ಷೆ ನಡೆಸಲಾಗುತ್ತಿದೆ. ಒಂದು ಗರ್ಭಿಣಿಯರ ಹೆರಿಗೆ ಸಮಯದಲ್ಲಿ, ಇನ್ನೊಂದು ರಕ್ತದಾನ ಮಾಡುವ ಸಮಯದಲ್ಲಿ ಎಂದು ಹೇಳಿದ್ದಾರೆ. ಕಳೆದ ಮೂರು ತಿಂಗಳಲ್ಲಿ ಒಟ್ಟು 5,53,453 ಜನರನ್ನು ಪರೀಕ್ಷೆಗೊಳಪಡಿಸಿದ್ದು, ಅದರಲ್ಲಿ 3,091 ಸೋಂಕಿತರು ಪತ್ತೆಯಾಗಿದ್ದಾರೆ.

ಈ ಪೈಕಿ 2,81,742 ಗರ್ಭಿಣಿಯರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು,111ಗರ್ಭಿಣಿಯರಲ್ಲಿಹೆಚ್‌ಐವಿಪಾಸಿಟಿವ್ ಕಂಡುಬಂದಿದೆ. ರಾಜ್ಯದಲ್ಲಿ 2004 ರಿಂದ ಇಲ್ಲಿಯವರೆಗೆ 39,028 ಸೋಂಕಿತರು ನೋಂದಾಯಿತರಾಗಿದ್ದಾರೆ. 18 ರಿಂದ 35 ವರ್ಷದೊಳಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸುಮಾರು 56,000 ಸೋಂಕಿತರು ಸದ್ಯ ತಪಾಸಣೆ ಮತ್ತು ನಿರಂತರ ಚಿಕಿತ್ಸಾ ವ್ಯಾಪ್ತಿಯಿಂದ ಹೊರಗುಳಿದಿರುವುದು ಕಂಡುಬಂದಿದ್ದು, ಅವರನ್ನು ಪತ್ತೆಹಚ್ಚಿ ಚಿಕಿತ್ಸೆಗೆ ತರುವ ಪ್ರಯತ್ನ ನಡೆಯುತ್ತಿದೆ. ರಾಜ್ಯದಲ್ಲಿ ಹೆಚ್‌ಐವಿ ಸೋಂಕಿತರ ಪ್ರಮಾಣ ಸಂಪೂರ್ಣ ನಿಯಂತ್ರಣದಲ್ಲಿದ್ದು, ಸಾರ್ವಜನಿಕರು ಯಾವುದೇ ಅನಗತ್ಯ ವದಂತಿಗಳಿಗೆ ಕಿವಿಗೊಡಬಾರದು ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ.

ಕರ್ನಾಟಕದ ಜಲಾಶಯಗಳಿಗೆ ಹರಿದು ಬಂದ ಜಲಧಾರೆ: ಒಂದೇ ದಿನದಲ್ಲಿ ಆಲಮಟ್ಟಿಗೆ 11 ಟಿಎಂಸಿ ನೀರು

ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಹಾಗೂ ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ಸುರಿಯುತ್ತಿರುವ ಮುಂಗಾರಿನ ಭಾರಿ ಮಳೆಯಿಂದಾಗಿ ರಾಜ್ಯದ ಪ್ರಮುಖ ಜಲಾಶಯಗಳಿಗೆ ಒಳಹರಿವಿನ ಪ್ರಮಾಣ ತೀವ್ರವಾಗಿ ಏರಿಕೆಯಾಗಿದೆ. ಕುಡಿಯುವ ನೀರು ಮತ್ತುಕೃಷಿ ಉದ್ದೇಶಗಳಿಗಾಗಿ ಬಳಸಲಾಗುವ ಕರ್ನಾಟಕದ 10 ಪ್ರಮುಖ ಜಲಾಶಯಗಳಿಗೆ ಕೇವಲ 24 ಗಂಟೆಗಳ ಅವಧಿಯಲ್ಲಿ ಬರೋಬ್ಬರಿ 20 ಟಿಎಂಸಿ (ಖಿಒಅ) ನೀರು ಹರಿದುಬಂದಿದೆ. ಇದರಲ್ಲಿಕೃಷ್ಣಾಕೊಳ್ಳದಆರುಜಲಾಶಯಗಳಿಗೇ ದಾಖಲೆಯ 17.4 ಟಿಎಂಸಿ ನೀರು ಸೇರ್ಪಡೆಯಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕದ ಜಲಾನಯನ ಪ್ರದೇಶಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯು ಆಲಮಟ್ಟಿ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ ಮತ್ತು ಭದ್ರಾ ಜಲಾಶಯಗಳಿಗೆ ನಿರಂತರ ನೀರಿನ ಆಸರೆಯಾಗುತ್ತಿದೆ. ವಿಶೇಷವೆಂದರೆ, ಜುಲೈ ತಿಂಗಳ ಆರಂಭದಲ್ಲಿ ಭದ್ರಾ ಜಲಾಶಯವನ್ನು ಹೊರತುಪಡಿಸಿ ಈ ಕೊಳ್ಳದ ಉಳಿದೆಲ್ಲಾ ಅಣೆಕಟ್ಟುಗಳಲ್ಲಿ ಒಳಹರಿವಿನ ಪ್ರಮಾಣ ಸಂಪೂರ್ಣ ಶೂನ್ಯವಾಗಿತ್ತು. ಆಲಮಟ್ಟಿಗೆ ಒಂದೇ ದಿನದಲ್ಲಿ



11 ಟಿಎಂಸಿ ನೀರು ಜುಲೈ 8 ರಂದು ಕೃಷ್ಣಾ ಕೊಳ್ಳದ ಪ್ರಮುಖ ಜಲಾಶಯವಾದ ಆಲಮಟ್ಟಿಗೆ ಕೇವಲ 24 ಗಂಟೆಗಳಲ್ಲಿ 1.26 ಲಕ್ಷ ಕ್ಯೂಸೆಕ್ (ಅಂದರೆ ಸುಮಾರು 10.92 ಟಿಎಂಸಿ) ನಷ್ಟು ಭಾರಿ ಒಳಹರಿವು ದಾಖಲಾಗಿದೆ. ಜುಲೈ 7 ರಂದು ಆಲಮಟ್ಟಿ ಜಲಾಶಯದಲ್ಲಿ 22.46 ಟಿಎಂಸಿ ನೀರು ಸಂಗ್ರಹವಿತ್ತು ಮತ್ತು ಕೇವಲ 21,625 ಕ್ಯೂಸೆಕ್ ಒಳಹರಿವು ಇತ್ತು. ಆದರೆ, ಬುಧವಾರದ ವೇಳೆಗೆ ಜಲಾಶಯದ ಪ್ರಸ್ತುತ ನೀರಿನ ಸಂಗ್ರಹ 33.34 ಟಿಎಂಸಿಗೆ ಏರಿಕೆಯಾಗಿದ್ದು, ಒಳಹರಿವು ಕೂಡ 1,26,373 ಕ್ಯೂಸೆಕ್‌ಗೆ ತಲುಪಿದೆ. ಘಟಪ್ರಭಾ ಮತ್ತು ತುಂಗಭದ್ರಾ ಸ್ಥಿತಿ ಜಲಾಶಯಗಳ ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಅತಿ ಹೆಚ್ಚು ಪ್ರಯೋಜನ ಪಡೆದ ಮತ್ತೊಂದು ಜಲಾಶಯವೆಂದರೆ ಘಟಪ್ರಭಾ. ಕೇವಲ 24 ಗಂಟೆಗಳ ಅವಧಿಯಲ್ಲಿ ಈ ಅಣೆಕಟ್ಟಿನ ನೀರಿನ ಮಟ್ಟ ಸುಮಾರು 4 ಟಿಎಂಸಿಯಷ್ಟು ಹೆಚ್ಚಾಗಿದೆ. ಇತ್ತ ತುಂಗಭದ್ರಾ ಜಲಾಶಯಕ್ಕೂ 24 ಗಂಟೆಗಳಲ್ಲಿ 17,507 ಕ್ಯೂಸೆಕ್ ಒಳಹರಿವು ದಾಖಲಾಗಿದ್ದು, 2 ಟಿಎಂಸಿಯಷ್ಟು ನೀರು ಸಂಗ್ರಹಕ್ಕೆ ಸೇರ್ಪಡೆಯಾಗಿದೆ. ಮಲಪ್ರಭಾಗೆ ಮೂರು ಪಟ್ಟು ಹೆಚ್ಚಿದ ಒಳಹರಿವು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಮಲಪ್ರಭಾ ನದಿಯ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಮಲಪ್ರಭಾ ಅಣೆಕಟ್ಟಿನ ಒಳಹರಿವು ಹಿಂದಿನ ದಿನಕ್ಕೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ. ಪ್ರಸ್ತುತ ಜಲಾಶಯಕ್ಕೆ 13,700 ಕ್ಯೂಸೆಕ್ ನೀರು ಹರಿದುಬರುತ್ತಿದೆ. ಇನ್ನು ಆಲಮಟ್ಟಿ ಜಲಾಶಯದ ಸಮತೋಲನ ಅಣೆಕಟ್ಟಾಗಿರುವ ನಾರಾಯಣಪುರ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಶೂನ್ಯವಾಗಿಯೇ ಮುಂದುವರಿದಿದೆ. ಪ್ರಸ್ತುತ ಈ ಅಣೆಕಟ್ಟು ತನ್ನ ಒಟ್ಟು 33 ಟಿಎಂಸಿ ಸಾಮರ್ಥ್ಯದ ಎದುರು 19.89 ಟಿಎಂಸಿ ನೀರನ್ನು ಹೊಂದಿದೆ. ಕಾವೇರಿ ಕೊಳ್ಳದ ಜಲಾಶಯಗಳಲ್ಲೂ ಸ್ಥಿರ ಪ್ರಗತಿ ಮತ್ತೊಂದೆಡೆ ಕಾವೇರಿ ಕೊಳ್ಳದ ನಾಲ್ಕು ಪ್ರಮುಖ ಜಲಾಶಯಗಳಿಗೆ ಒಳಹರಿವಿನ ಪ್ರಮಾಣ ನಿಧಾನ ಹಾಗೂ ಸ್ಥಿರವಾಗಿ ಮುಂದುವರಿದಿದೆ. ಈ ನಾಲ್ಕು ಅಣೆಕಟ್ಟುಗಳ ಒಟ್ಟು ನೀರಿನ ಸಾಮರ್ಥ್ಯ 114.57 ಟಿಎಂಸಿ ಆಗಿದ್ದು, ಪ್ರಸ್ತುತ 43.25 ಟಿಎಂಸಿ (ಶೇ. 38 ರಷ್ಟು) ನೀರು ಸಂಗ್ರಹವಾಗಿದೆ. ಜುಲೈ 7 ರಂದು ಇವುಗಳಲ್ಲಿ 40.23 ಟಿಎಂಸಿ ನೀರಿತ್ತು. ಕಾವೇರಿ ಕೊಳ್ಳದಲ್ಲಿ ಹಾರಂಗಿ ಜಲಾಶಯವು ಅತ್ಯಂತ ಕಡಿಮೆ ಎಂದರೆ 1,657 ಕ್ಯೂಸೆಕ್ ಒಳಹರಿವನ್ನು ಪಡೆದಿದೆ. ಆದರೆ ಹೇಮಾವತಿ ಜಲಾಶಯದ ಒಳಹರಿವು ಕಳೆದ 24 ಗಂಟೆಗಳಲ್ಲಿ ದುಪ್ಪಟ್ಟಾಗಿದ್ದು, 16,593 ಕ್ಯೂಸೆಕ್‌ಗೆ ತಲುಪಿದೆ. ಅದೇ ರೀತಿ ಕಬಿನಿ ಜಲಾಶಯದ ಒಳಹರಿವು ಕೂಡ ಒಂದೇ ದಿನದಲ್ಲಿ ದುಪ್ಪಟ್ಟಾಗಿದ್ದು, ಪ್ರಸ್ತುತ 10,757 ಕ್ಯೂಸೆಕ್ ನೀರು ಹರಿದುಬರುತ್ತಿದೆ. ಒಟ್ಟಾರೆಯಾಗಿ ರಾಜ್ಯದ ಪ್ರಮುಖ ನದಿ ಕೊಳ್ಳಗಳಲ್ಲಿ ನೀರಿನ ಆಶಾಭಾವನೆ ಮೂಡಿದ್ದು, ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ವೇಗ ಸಿಗುವ ಲಕ್ಷಣಗಳು ಕಾಣಿಸುತ್ತಿವೆ.

ಆಗಸ್ಟ್ 6,7 ಮತ್ತು 8 ರಂದು ಮೂರುದಿನಗಳ ಕಾಲ ದೊಡ್ಡ ಹೊಸೂರಿನಲ್ಲಿ ಸತ್ಯಾಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಎಐ ಹೆಸರಿನಲ್ಲಿ ಇಡೀ ಯುವಜನರ ಬದುಕಿಗೆ ಕೊಳ್ಳಿ ಇಡಲು ಹೊರಟಿರುವ ಎಐ ಡೇಟಾಸೆಂಟರ್ ನಿರ್ಮಾಣ ವಿರೋಧಿ, ಅದರಿಂದ ಸಾರ್ವಜನಿಕರ ಮೇಲಾಗುವ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಗಾಂಧಿ ಸಹಜ ಬೇಸಾಯ ಆಶ್ರಮದ ನೇತೃತ್ವದಲ್ಲಿ ವಿವಿಧ ರೈತ ಪರ ಸಂಘಟನೆಗಳು ಸೇರಿ ಆಗಸ್ಟ್ 6,7 ಮತ್ತು 8 ರಂದು ಮೂರುದಿನಗಳ ಕಾಲ ದೊಡ್ಡ ಹೊಸೂರಿನಲ್ಲಿ ಸತ್ಯಾಗ್ರಹ ಕೈಗೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ತುಮಕೂರು ಜಿಲ್ಲಾಧ್ಯಕ್ಷ ಎ.ಗೋವಿಂದರಾಜು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ರಾಜ್ಯ ಸರಕಾರ ಬಿಡದಿ ಬಳಿ ಸುಮಾರು 9470 ಎಕರೆ ಜಾಗದದಲ್ಲಿ ಬಿಡದಿ ಟೌನ್‌ಶಿಫ್ ಯೋಜನೆ ಜಾರಿಗೆ ತರುತ್ತಿದ್ದು, ಇದರಲ್ಲಿ ಆಟೋಮೇಷನ್ ರೋಬೋಟ್ ಡೇಟಾ ಸೆಂಟರ್ ತರುವ ಉದ್ದೇಶ ಹೊಂದಿದ್ದು,ಈ ಸೆಂಟರ್‌ಗೆ ಹೇಮಾವತಿ ನಾಲಾವಲಯದ 70 ಕಿ.ಮಿ. ಎಕ್ಸ್‌ಪ್ರೆಸ್ ಕೆನಾಲ್ ಮೂಲಕ ನೀರು ತೆಗೆದುಕೊಂಡು ಹೋಗಲು ಮುಂದಾಗಿದೆ. ಇದರಿಂದ ಜಿಲ್ಲೆಯ ನೀರಾವರಿ ಯೋಜನೆಗಳ ಮೇಲೆ ದುಷ್ಪರಿಣಾಮ ಉಂಟು ಮಾಡಲಿದೆ.ಹಾಗಾಗಿ ಇದರ ಬಗ್ಗೆ ನಾವು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆ ಭೂಮಿ, ಕುಡಿಯುವ ನೀರು ಇಲ್ಲದೆ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಲಿದೆ.ಹಾಗಾಗಿ ನಾವು ಈ ಎಐ ಡೆಟಾ ಸೆಂಟರ್ ವಿರೋಧಿಸಿ,ದೊಡ್ಡ ಹೊಸೂರಿನ ಗಾಂಧಿ ಸಹಜ ಬೇಸಾಯ ಆಶ್ರಮದಲ್ಲಿ ಆಗಸ್ಟ್ 6-7 ಮತ್ತು 8 ರಂದು



ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಗಾಂಧಿ ಸಹಜ ಬೇಸಾಯ ಆಶ್ರಯದಲ್ಲಿ ಆಗಸ್ಟ್ 06 ರಂದು ಎಐ ಡೆಟಾ ಸೆಂಟರ್ ಕುರಿತು ಈಗಾಗಲೇ ಎಐ ಡೆಟಾ ಸೆಂಟರ್‌ನಿಂದ ತೊಂದರೆ ಒಳಗಾದ ಜನರ ಕುರಿತು ಸಂಶೋಧನೆ ನಡೆಸಿರುವ ಅಮೇರಿಕಾದ ತಜ್ಞರು ಸೇರಿದಂತೆ ಇದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಹಿರಿಯರು ವಿಷಯ ಮಂಡಿಸಿ ಮಾತನಾಡುವರು. ಆಗಸ್ಟ್ 07 ರಂದು ಸರಕಾರ ಸ್ಥಾಪಿಸಲು ಹೊರಟಿರುವ ಎಐ.ಡೇಟಾ ಸೆಂಟರ್ ನಿಂದ ಜನಜೀವನದ ಮೇಲಾಗುವ ದುಷ್ಪರಿಣಾಮಗಳ ಕುರಿತು ಸರಕಾರಕ್ಕೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ದೊಡ್ಡ ಹೊಸೂರು ಸಮೀಪದ ಹೊನ್ನುಡಿಕೆ ಹ್ಯಾಂಡ್‌ಪೋಸ್ಟ್‌ನಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.ಪಾದಯಾತ್ರೆ ಮೂಲಕ ಆಗಮಿಸಿ, ಜಿಲ್ಲಾಧಿಕಾರಿಗಳಿಗೆ ಎಐ ಡೇಟಾ ಸಂಟರ್‌ನ ಸಾಧಕ, ಭಾದಕಗಳ ಕುರಿತು ಮನವರಿಕೆ ಮಾಡಿಕೊಡಲಾಗುವುದು. ಆಗಸ್ಟ್ 08 ರಂದು ಗಾಂಧಿ ಸಹಜ ಬೇಸಾಯ ಆಶ್ರಯದಲ್ಲಿ ಮುಂದಿನ ಹೋರಾಟಗಳ ಕುರಿತು ರೈತನಾಯಕರು, ಹೋರಾಟಗಾರರು, ವಿದ್ಯಾರ್ಥಿ ಯುವಜನರೊಂದಿಗೆ ಚರ್ಚೆ ನಡೆಯಲಿದೆ.ಇದರ ಜೊತೆಗೆ ಆಗಸ್ಟ್ 10 ರಂದು ಕ್ವಿಟ್ ಇಂಡಿಯಾ ಹೋರಾಟದ ಭಾಗವಾಗಿ ಕಿಸಾನ್ ಸಂಯುಕ್ತ ಹೋರಾಟ, ಜೆಸಿಟಿಯು ಹಾಗೂ ಇನ್ನಿತರ ಸಂಸ್ಥೆಗಳ ಸಹಕಾರದಲ್ಲಿ ಭಾರತ ದೇಶದ ಅಭಿವೃದ್ದಿಗೆ ಮಾರಕವಾಗಿರುವ ಬಹುರಾಷ್ಟ್ರೀಯ ಕಂಪನಿಗಳೇ ಭಾರತ ಬಿಟ್ಟು ತೊಲಗಿ ಎಂಬ ಜೈಲ್ ಭರೋ ಚಳವಳಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಎ.ಗೋವಿಂದರಾಜು ತಿಳಿಸಿದರು. ಕೃಷಿ ವಿಜ್ಞಾನಿ ಹಾಗೂ ಗಾಂಧಿ ಸಹಜ ಬೇಸಾಯ ಆಶ್ರಮದ ಮುಖ್ಯಸ್ಥರಾದ ಡಾ.ಮಂಜುನಾಥ್ ಮಾತನಾಡಿ,ಎಐಯನ್ನು ಇಂದು ನಾವೆಲ್ಲರೂ ಬಹಳ ಉತ್ಸುಕತೆಯಿಂದ ಅಪ್ಪಿಕೊಳ್ಳುತಿದ್ದೇವೆ.ಆಟೋಮೆಷನ್ ರೋಬೋಟ್‌ಗಳ ದಸೆಯಿಂದ ಯುವಜನತೆ ಉದ್ಯೋಗ ಕಳೆದುಕೊಳ್ಳಲಿದ್ದಾರೆ.ಈಗಾಗಲೇ ಟೆಕ್ನೈಲ್ ಕಂಪನಿಯಲ್ಲಿ ಈ ಪ್ರಯೋಗ ನಡೆಯುತ್ತಿದೆ.ಅದು ಜಾರಿಗೆ ಬಂದರೆ ಲಕ್ಷಾಂತರ ಹೆಣ್ಣು ಮಕ್ಕಳು ಉದ್ಯೋಗವಿಲ್ಲದ ಬೀದಿಗೆ ಬರಲಿದ್ದಾರೆ. ಉದ್ಯೋಗವಿಲ್ಲವೆಂದ ಮೇಲೆ ಹಣವಿಲ್ಲ. ಹಣವಿಲ್ಲದೆ ಕೊಳ್ಳುವ ಶಕ್ತಿಯಿಲ್ಲದೆ,ಮಾರುಕಟ್ಟೆಯ ಮೇಲೆ ಒಡೆತ ನೀಡಲಿದೆ.ಇದರಿಂದ ದೇಶದ ಜಿಡಿಪಿಗೆ ಬಹಳ ಹಾನಿಯಾಗಲಿದೆ. ಇದರ ಬಗ್ಗೆ ಯಾರೊಬ್ಬರು ಯೋಚಿಸುತ್ತಿಲ್ಲ.ಎಐ ಮೂಲಕ ಕ್ಲೌಡ್ ಅಕ್ಸಸ್‌ನಿಂದ ಬಡತನ ನಿರ್ಮೂಲನೆ ಬದಲು ಬಡವರ ನಿರ್ಮೂಲನೆಯಾಗಲಿದೆ. ಅಲ್ಲದೆ ಒಂದು ಗೀಗಾ ಬೈಟ್ ಎಐ ಡೆಟಾ ಸೆಂಟರ್‌ಗೆ ವರ್ಷಕ್ಕೆ 4 ಟಿ.ಎಂ.ಸಿ ನೀರು ಬೇಕಾಗುತ್ತದೆ.ಇದರಿಂದ ನೀರಿನ ತೊಂದರೆ,ಇದರಲ್ಲಿ ಕೆಲಸ ಮಾಡುವ ಜನರ ಸಂಚಾರಕ್ಕೆ ವಿಮಾನ ನಿಲ್ದಾಣ, ರಸ್ತೆ ನಿರ್ಮಾಣಕ್ಕೆ ಭೂಮಿ ಹೀಗೆ ಎಲ್ಲವನ್ನು ಜನಸಮಾನ್ಯರು ಕಳೆದುಕೊಳ್ಳಲಿದ್ದಾರೆ.ಈಗಲೇ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂಬರುವ ಅಪಾಯದಿಂದ ಪಾರಾಗಲು ಸಾಧ್ಯವಿಲ್ಲ.ಹಾಗಾಗಿ ಆಗಸ್ಟ್ 6-7 ಮತ್ತು 8 ರಂದು ಮೂರು ದಿನಗಳ ಕಾಲ ತಜ್ಞರೊಂದಿಗೆ ಚರ್ಚೆ, ಸಂವಾದ, ಪಾದಯಾತ್ರೆ ಎಲ್ಲವೂ ಈ ಮೂರು ದಿನಗಳ ಕಾಲದ ಸತ್ಯಾಗ್ರಹದಲ್ಲಿ ಇರಲಿದೆ.ಸುಮಾರು 2500 ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಎಐ ಡೆಟಾ ಸೆಂಟರ್‌ನಿಂದಾಗುವ ತೊಂದರೆಗಳ ಕುರಿತು ಅಮೇರಿಕಾದ ಸಂಶೋಧಕ ರೇಮೋಲ್, ದೇವಜೈನ್ ಹಾಗೂ ಶಾಸಕ ದರ್ಶನ ಪುಟ್ಟಣ್ಣಯ್ಯ ವಿಚಾರ ಮಂಡಿಸಿ ಮಾತನಾಡಲಿದ್ದಾರೆ.ಪರಿಸರ ವಾದಿ ಸುರೇಶ್ ಹೆಬ್ಳಿಕರ್,ಬಡಗಲಪುರ ನಾಗೇಂದ್ರಪ್ಪ, ಮಹಿಮಾ ಜೆ ಪಟೇಲ್ ಸೇರಿದಂತೆ ಹಲವು ತಜ್ಞರು ಸಂವಾಧದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಡಾ.ಮಂಜುನಾಥ್ ತಿಳಿಸಿದರು. ಸಂಯುಕ್ತ ಹೋರಾಟದ ಸಿ.ಯತಿರಾಜು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಮುಖಂಡರಾದ ಜಿ.ಎಸ್ ಶಂಕರಪ್ಪ,ನಾಗರತ್ನಮ್ಮ,ಚಿಕ್ಕಬೋರೇಗೌಡ,ವೆಂಕಟಪ್ಪಗೌಡ,ಚಿಕ್ಕಬೋರೇಗೌಡ, ಕೆಂಚಪ್ಪ, ಲಕ್ಷ್ಮಣಗೌಡ,ಅರೇಹಳ್ಳಿ ಮಂಜುನಾಥ್, ಮೋಹನ್. ರಂಗಮುದ್ದಯ್ಯ,ಜಿ. ಜೆ.ಲೋಕೇಶ್, ಲಿಂಗರಾಜು ಮತ್ತಿತರರು ಪಾಲ್ಗೊಂಡಿದ್ದರು.

ಗರ್ಭಿಣಿ ಹಸುವಿಗೆ ಸೀಮಂತ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲೆಯ ಗುಬ್ಬಿ ತಾಲೂಕಿನ ತೋಟಸಾಗರ ಗ್ರಾಮದಲ್ಲಿ ರೈತ ಕರೇಗೌಡ ಎಂಬುವವರು ತಮ್ಮ ಮನೆಯಲ್ಲಿ ಪ್ರೀತಿಯಿಂದ ಸಾಕಿದ 'ಲಕ್ಷ್ಮಿ' ಎಂಬ ಗರ್ಭಿಣಿ ಹಸುವಿಗೆ ಅತ್ಯಂತ ಸಂಭ್ರಮದಿಂದ ಸೀಮಂತ ಶಾಸ್ತ್ರ ನೆರವೇರಿಸಿದ್ದಾರೆ. ಗ್ರಾಮದ ಮಹಿಳೆಯರು ಸಾಂಪ್ರದಾಯಿಕವಾಗಿ ಹಸುವಿಗೆ ಅರಿಶಿನ-ಕುಂಕುಮ ಹಚ್ಚಿ, ಆರತಿ ಬೆಳಗಿ, ಮಡಿಲು ತುಂಬಿ ಹಾರೈಸಿದರು. ಈ ಅಪರೂಪದ ಹಾಗೂ ವಿಶೇಷ ಕಾರ್ಯಕ್ರಮದ ನೆಪದಲ್ಲಿ ಇಡೀ ಊರಿನ ನೂರಾರು ಜನರಿಗೆ ಘಮಘಮಿಸುವ ಹೋಳಿಗೆ ಊಟದ ಸತ್ಕಾರ ಏರ್ಪಡಿಸಲಾಗಿತ್ತು. ರೈತನ ಈ ಗೋಪ್ರೇಮಕ್ಕೆ ತೋಟಸಾಗರ ಗ್ರಾಮಸ್ಥರು ಸಾಕ್ಷಿಯಾಗಿ ಸಂತಸ ವ್ಯಕ್ತಪಡಿಸಿದ್ದಾರೆ.



ರಾಹುಲ್‌ಗಾಂಧಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಉಡುಪಿ ಶಾಸಕರ ನಡೆ ಖಂಡನೀಯ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನೀಟ್ ಹಗರಣ ಖಂಡಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳಿಗೆ ಬೆಂಬಲ ವ್ಯಕ್ತಪಡಿಸಿ, ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್‌ಗಾಂಧಿ ಅವರ ಬಗ್ಗೆ ಅವಹೇಳನ ಕಾರಿಯಾಗಿ ಮಾತನಾಡಿರುವ ಉಡುಪಿ ಶಾಸಕ ಯಶ್ಪಾಲ್ ಸುವರ್ಣ ಅವರ ನಡೆ ಖಂಡನೀಯ. ಸರಕಾರ ಕೂಡಲೇ ಅವರ ವಿರುದ್ದ ಕಾನೂನು ಕ್ರಮ ಜರುಗಿಸಬೇಕು ಎಂದು ತುಮಕೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್ ಅಹಮದ್ ಒತ್ತಾಯಿಸಿದ್ದಾರೆ.

ಜಿಲ್ಲಾಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕನಿಗೆ ಸಂವಿಧಾನದ ಅಡಿಯಲ್ಲಿ ಅದರದ್ದೇ ಘನತೆ, ಗೌರವವಿದೆ. ಅದನ್ನು ಮರೆತು, 1992ರಲ್ಲಿ ಬಾಬರಿ ಮಸೀದಿ ಧ್ವಂಸ ಮಾಡಿದಂತೆ, ನಿಮ್ಮ ಕುಟುಂಬವನ್ನು ಧ್ವಂಸ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುವುದು ಜನಪ್ರತಿನಿಧಿಯಾಗಿರುವ ಅವರಿಗೆ ಶೋಭೆತರುವಂತಹದ್ದಲ್ಲ. ಹಾಗಾಗಿ ಇಂದು ಅವರ ವಿರುದ್ದ ಕಾನೂನು ಕ್ರಮಕ್ಕೆ ಆಗಹಿಸಿ ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ. ಸರಕಾರಅವರ ವಿರುದ್ದ ದ್ವೇಷ ಭಾಷಣ ತಡೆಕಾಯ್ದೆ ಅನ್ವಯ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನೆಹರು ಮನೆತನ ದೇಶಕ್ಕಾಗಿ ತಮ್ಮತನು. ಮನ, ಪ್ರಾಣ, ಆಸ್ತಿ ಪಾಸ್ತಿ ಎಲ್ಲವನ್ನು ಆರ್ಪಿಸಿದೆ. ಬಿಜೆಪಿಯವರ ರೀತಿ ಗಾಂಧಿಯನು ಕೊಂದ, ಬ್ರಿಟಿಷರಿಗೆ ಕ್ಷಮಾಪಣಾ ಪತ್ರ ಬರೆದು ಕೊಟ್ಟ



ಕುಟುಂಬವಲ್ಲ. ಅಂತಹ ವ್ಯಕ್ತಿಗೆ ಕೊಲೆ ಬೆದರಿಕೆ ಹಾಕಿರುವುದು ಖಂಡನೀಯ. ದ್ವೇಷ ಭಾಷಣವನ್ನೇ ತಮ್ಮ ಪ್ರಚಾರದಲ್ಲಿ ಅಳವಡಿಸಿಕೊಂಡಿರುವ ಬಿಜೆಪಿಯ ನಾಯಕರು, ಈ ದೇಶದ ಸ್ವಾತಂತ್ರಕ್ಕೆ, ಅಭಿವೃದ್ದಿಗೆ ನಿಮ್ಮಕೊಡುಗೆ ಏನು ಎಂಬುದನ್ನು ಬಹಿರಂಗ ಪಡಿಸಬೇಕುಎಂದರು.

ರಾಹುಲ್ ಗಾಂಧಿ ಅವರುದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ಕನ್ಯಾ ಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋಯಾತ್ರೆ ನಡೆಸಿದರು. ಇಂತಹ ನಾಯಕನನ್ನು ಹತ್ಯೆ ಮಾಡುವುದಾಗಿ ಬಹಿರಂಗ ಹೇಳಿಕೆ ನೀಡುವ ಮಟ್ಟಕ್ಕೆ ಬಿಜೆಪಿಯದ್ವೇಷ ಬೆಳೆದಿದೆ.ಇದಕ್ಕೆ ಕೇಂದ್ರ ಸರಕಾರದ ಕುಮ್ಮಕ್ಕು ಇದೆ ಎಂಬುದಕ್ಕೆಯಾವುದೇ ಸಾಕ್ಷೀ ಬೇಕಿಲ್ಲ.ಇಲ್ಲದಿದ್ದರೆ ಇಷ್ಟು ಹೊತ್ತಿಗೆ ತಮ್ಮ ಶಾಸಕರ ವಿರುದ್ದ ಕ್ರಮ ಕೈಗೊಳ್ಳುತ್ತಿದ್ದರು. ವಿಪರ್ಯಾಸ ಎಂದರೆ, ಅಂತಹವರನ್ನೇ ಹಾರ ಹಾಕಿ ಬರ ಮಾಡಿಕೊಂಡಿರುವುದು ಈ ದೇಶದ ಪ್ರಜಾ ಪ್ರಭುತ್ವವನ್ನು ಅಣಕಿಸಿದಂತಿದೆ ಎಂದು ಇಕ್ಬಾಲ್ ಅಹಮದ್ ತಿಳಿಸಿದರು. ಹಿರಿಯರಾದ ಕೆಂಚಮಾರಯ್ಯ ಮಾತನಾಡಿ, ಒರ್ವ ವಿರೋಧ ಪಕ್ಷದ ನಾಯಕನಿಗೆ ಕೊಲೆ ಬೆದರಿಕೆ ಹಾಕಿದವನಿಗೆ ಜೈಕಾರ ಹಾಕಿ ಸ್ವಾಗತಿಸುವ ಭಾರತದಲ್ಲಿ ನಿಜವಾಗಿಯೂ ಅಂತರಿಕ ತುರ್ತು ಪರಿಸ್ಥಿತಿ ಇದೆ ಎಂಬುದಕ್ಕೆ ಯಾವುದೇ ಅನುಮಾನವಿಲ್ಲ. ವಿರೋಧಪಕ್ಷದ ನಾಯಕನೆಂದರೆ ಷಾಡೋ ಪ್ರಧಾನಮಂತ್ರಿ ಇದ್ದಂತೆ. ಕಾಂಗ್ರೆಸ್ ಪಕ್ಷ ಹಾಗೂ ಅದರ ಮುಖಂಡರು ಈ ದೇಶಕ್ಕಾಗಿ ಎಲ್ಲವನ್ನು ತ್ಯಾಗ ಮಾಡಿದ್ದಾರೆ. ಅವರ ತ್ಯಾಗ, ಬಲಿದಾನದ ಮೇಲೆ ಕಟ್ಟಿದ ಭಾರತದಲ್ಲಿ ನಿಂತು ಕೊಂಡು ಬಿಜೆಪಿಯಲ್ಲಿ ಯುವಜನತೆಯಲ್ಲಿ ರಾಷ್ಟ್ರ ಭಕ್ತಿಯ ಹುಸಿ ಭ್ರಮೆಯನ್ನು ಬಿತ್ತಿ, ದೇಶವನ್ನು ಹಿಂದೂ-ಮುಸ್ಲಿಂ ಎಂದು ಒಡೆಯಲು ಹೊರಟಿದ್ದಾರೆ. ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಮಾತು, ಈ ದೇಶದ ಮತದಾರರಿಗೆ, ಸಾರ್ವಜನಿಕರಿಗೆ ಮಾಡಿದ ಅಪಮಾನ. ಹಾಗಾಗಿ ಅವರ ವಿರುದ್ದ ಕಾನೂನು ಕ್ರಮಜರುಗಿಸಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ನಿಂಗರಾಜು ಮತ್ತು ಹಿಂದುಳಿದ ವರ್ಗಗಳ ವಿಭಾಗದ ಗುರುಪ್ರಸಾದ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ರೈತ ವಿಭಾಗದ ಜಿ.ಎಲ್. ಗೌಡ, ಬ್ಲಾಕ್‌ಕಾಂಗ್ರೆಸ್ ಅಧ್ಯಕ್ಷ ಫಯಾಜ್, ಮುಖಂಡರಾದ ವಾಲೆಚಂದ್ರು, ಅಲ್ಪಸಂಖ್ಯಾತರ ಘಟಕದ ಇರ್ಫಾನ್, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಅನಿಲ್, ಕಾರ್ಮಿಕ ವಿಭಾಗದ ಅಧ್ಯಕ್ಷ ವಿ.ಎಸ್.ಸೈಯದ್ ದಾದಾಪೀರ್, ಸೇವಾದಳದ ಭೈಲಪ್ಪ, ತಿಪಟೂರು ತಾಲೂಕಿನ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ನ್ಯಾಯಮೂರ್ತಿಗಳ ಮೇಲೆ ಹಲ್ಲೆ ಖಂಡಿಸಿ ವಕೀಲರಿಂದ ಪ್ರತಿಭಟನೆ,ಕಲಾಪ ಬಹಿಷ್ಕಾರ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ: ನ್ಯಾಯಾಲಯದ ಆವರಣದಲ್ಲೇ ನ್ಯಾಯಮೂರ್ತಿಗಳ ಮೇಲೆ ಅನಾಮಿಕ ಮಹಿಳೆಯೊಬ್ಬರು ಹಲ್ಲೆ ಮಾಡಿರುವ ಘಟನೆಯನ್ನು ಖಂಡಿಸಿ, ಪಾವಗಡ ತಾಲ್ಲೂಕು ವಕೀಲರ ಸಂಘವು ಶುಕ್ರವಾರ ನ್ಯಾಯಾಲಯದ ಕಲಾಪವನ್ನು ಸಂಪೂರ್ಣವಾಗಿ ಬಹಿಷ್ಕರಿಸಿತು.

ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ ವಕೀಲರ ಸಂಘದ ಪದಾಧಿಕಾರಿಗಳು ಮತ್ತು ವಕೀಲರು ತಾಲ್ಲೂಕು ಕಚೇರಿಯ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು. ನ್ಯಾಯಾಂಗದ ಘನತೆಗೆ ಧಕ್ಕೆ ತರುವಂತಹ ಕೃತ್ಯವನ್ನು ಕೂಡಲೇ ಖಂಡಿಸಬೇಕು ಮತ್ತು ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡ ಪ್ರಮುಖರು

ಈ ಪ್ರತಿಭಟನೆಗೆ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಆರ್. ರಂಗನಾಥಪ್ಪ ನೇತೃತ್ವ ವಹಿಸಿದ್ದರು. ಉಪಾಧ್ಯಕ್ಷ ಹನಮಂತರಾಯಪ್ಪ ಸೇರಿದಂತೆ ಹಲವು ಹಿರಿಯ ವಕೀಲರು ಭಾಗವಹಿಸಿದ್ದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡ ಇತರ ವಕೀಲರ ಹೆಸರುಗಳು: ಚಂದ್ರಪ್ಪ, ಪಾಂಡುರಂಗಪ್ಪ, ಆರ್. ಎಚ್. ಹನಮಂತರಾಯಪ್ಪ, ಪಿ. ಆರ್. ರಮೇಶ್, ಸುಧಾಕರ್, ರಮೇಶ್, ಟಿ. ಎನ್. ಪೇಟೆ ಅಂಜಿಗೌಡ, ಅಭಿಲಾಶ್, ಅಹಿಷಾ, ಗೌಶಿಯ, ತೇಜಸ್ವಿನಿ, ಅಶ್ವಿನಿ, ರೇಖಾ, ರೂಪ, ಅಂಜನೇಯಲು, ಸಂಜೀವಪ್ಪ, ಮಲ್ಲಿಕಾರ್ಜುನ ಸೇರಿದಂತೆ ಸಂಘದ ಅನೇಕ ವಕೀಲರು ಘೋಷಣೆಗಳನ್ನು ಕೂಗುತ್ತ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ವಕೀಲರ ಆಗ್ರಹ

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಅಧ್ಯಕ್ಷ ಆರ್. ರಂಗನಾಥಪ್ಪ ಮಾತನಾಡಿ, "ನ್ಯಾಯಾಲಯ ಎಂಬುದು ನ್ಯಾಯ ಸಿಗುವ ಪವಿತ್ರ ಸ್ಥಳ. ಅಲ್ಲೇ ನ್ಯಾಯಮೂರ್ತಿಗಳ ಮೇಲೆ ಹಲ್ಲೆನಡೆಯುವುದು ನ್ಯಾಯಾಂಗದ ಮೇಲಿನ ದಾಳಿ. ಇದನ್ನು ನಾವು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಸರ್ಕಾರ ಮತ್ತು ಉನ್ನತ ನ್ಯಾಯಾಂಗವು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ನ್ಯಾಯಾಲಯಗಳ ಭದ್ರತೆಯನ್ನು ಹೆಚ್ಚಿಸಬೇಕು" ಎಂದು ಒತ್ತಾಯಿಸಿದರು.

ಅಪರಾಧಿಗೆ ಕಠಿಣ ಶಿಕ್ಷೆಯಾಗುವವರೆಗೆ ಹೋರಾಟ ಮುಂದುವರಿಸುವುದಾಗಿ ವಕೀಲರು ಎಚ್ಚರಿಕೆ ನೀಡಿದರು. ಈ ಕಾರಣದಿಂದಾಗಿ ಇಡೀ ದಿನ ಪಾವಗಡ ನ್ಯಾಯಾಲಯದಲ್ಲಿ ಯಾವುದೇ ಕಲಾಪಗಳು ನಡೆಯಲಿಲ್ಲ. ವಾದಿಗಳು ಮತ್ತು ಸಾರ್ವಜನಿಕರು ಪರದಾಡುವಂತಾಯಿತು.

ತುಮಕೂರು ಜಿಲ್ಲೆಗೆ ಕೆಲಸಕ್ಕೆ ಬರುವ ಸರ್ಕಾರಿ ಅಧಿಕಾರಿಗಳು ಹೆದರಿಕೊಂಡು ಬರುವ ಅಗತ್ಯವಿಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ಜಿಲ್ಲೆಗೆ ಕೆಲಸಕ್ಕೆ ಬರುವವರು ಯಾರೂ ಹೆದರಿಕೊಂಡು ಬರುವ ಅಗತ್ಯವಿಲ್ಲ. ಇಲ್ಲಿಗೆ ಬರುವ ಪ್ರತಿಯೊಬ್ಬರಿಗೂ ಧೈರ್ಯವಾಗಿ ಕೆಲಸ ಮಾಡಲು ಉತ್ತಮ ಅವಕಾಶ ಹಾಗೂ ವಾತಾವರಣ ಸಿಗುತ್ತದೆ. ಯಾರಿಗೂ ತೊಂದರೆ ಮಾಡದೆ, ಎಲ್ಲರನ್ನೂ ಸ್ನೇಹದಿಂದ ನೋಡಿಕೊಳ್ಳುವುದು ನಮ್ಮ ಜಿಲ್ಲೆಯ ಶೈಲಿ ಎಂದು ರಾಜ್ಯ ಜಂಟಿ ಸಾರಿಗೆ ಆಯುಕ್ತರಾದ ಗಾಯಿತ್ರಿದೇವಿ ತಿಳಿಸಿದರು. ನಗರದ ಆರ್ ಟಿ ಓ ಕಚೇರಿಯಲ್ಲಿ ನಡೆದ ಆರ್‌ಟಿಓ ಅಧಿಕಾರಿ ಎ ವಿ ಪ್ರಸಾದ್ ಅವರ ನಿವೃತ್ತಿ ಬಿಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು ಪ್ರಸ್ತುತ ದಿನಗಳಲ್ಲಿ ತುಮಕೂರು ಭಾಗದಲ್ಲಿ ಪ್ರತಿನಿತ್ಯ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಶೀಘ್ರದಲ್ಲೇ ಬರಲಿರುವ ವಿಮಾನ ನಿಲ್ದಾಣ, ಕ್ರೀಡಾಂಗಣ (ಸ್ಟೇಡಿಯಂ), ಅಂತಾರಾಷ್ಟ್ರೀಯ ಮಟ್ಟದ ಫುಡ್ ಪಾರ್ಕ್ ಹಾಗೂ ಹೆಚ್.ಎ.ಎಲ್ (ಯೋಜನೆಗಳನ್ನು ಅವರು ಉಲ್ಲೇಖಿಸಿದರು ತುಮಕೂರು ಜಿಲ್ಲೆಯು ದೇಶ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಹಲವು ಮಹಾನ್ ವ್ಯಕ್ತಿಗಳನ್ನು ನೀಡಿದೆ. ನಡೆದಾಡುವ ದೇವರೆನಿಸಿದ ಸಿದ್ದಗಂಗಾ ಶ್ರೀಗಳು, ನ್ಯಾಯಾಂಗ ಕ್ಷೇತ್ರದಲ್ಲಿ ಹೆಸರು ಮಾಡಿದ ನಿಟ್ಟೂರು ಶ್ರೀನಿವಾಸರಾವ್, ಶಿಕ್ಷಣ ಕ್ಷೇತ್ರದ ಶಿಕ್ಷಣ ಭೀಷ್ಮ ಗಂಗಧಾರಯ್ಯ ಅವರು ಸೇರಿದಂತೆ ಅನೇಕ ಪ್ರಸಿದ್ಧ ವ್ಯಕ್ತಿಗಳು ಈ ಮಣ್ಣಿಗೆ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ನಿವೃತ್ತಿಯಾದ ಆರ್‌ಟಿಓ ಅಧಿಕಾರಿ ಎ. ವಿ. ಪ್ರಸಾದ್ ಅವರು ಮಾತನಾಡಿ 2024ರ ಆಗಸ್ಟ್ 16ರಂದು ತುಮಕೂರಿಗೆ ಬಂದಾಗ



ಹಲವರು ಈ ಸ್ಥಳಕ್ಕೆ ಹೋಗದಂತೆ ಸಲಹೆ ನೀಡಿದ್ದರು. ಆದರೆ ಇಲ್ಲಿ ಬಂದಮೇಲೆ ಜನರು ಅತ್ಯಂತ ಒಳ್ಳೆಯವರು ಹಾಗೂ ಸಹಕಾರ ನೀಡುವವರು ಎಂಬುದು ತಿಳಿಯಿತು. ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡುವಲ್ಲಿ ಸಾರ್ವಜನಿಕರು ಯಾವುದೇ ವಿರೋಧ ವ್ಯಕ್ತಪಡಿಸದೆ ಸಹಕರಿಸಿದರು, ಟ್ರ್ಯಾಕ್ಟರ್‌ಗಳ ನೋಂದಣಿ ಸೇರಿದಂತೆ ಇಲಾಖೆಯ ಕೆಲಸಗಳನ್ನು ವ್ಯವಸ್ಥಿತಗೊಳಿಸಲಾಯಿತು ಸಾರ್ವಜನಿಕರು ತಾವೇ ಸ್ವತಃ ಬಂದು ಇನ್ಸೆಕ್ಷನ್ ಮಾಡಿಸಿಕೊಂಡು ನೋಂದಣಿ ಮಾಡಿಸುವ ಮಟ್ಟಿಗೆ ಜಾಗೃತಿ ಮತ್ತು ಸುಧಾರಣೆ ಬಂದಿದೆ.

ಸಾರ್ವಜನಿಕರ ಅನುಕೂಲ ಕ್ಕಾಗಿ ಕಚೇರಿಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಯಿತು ಶ್ರೀ ಶಿವಕುಮಾರ ಸ್ವಾಮೀಜಿಗಳ ಪವಿತ್ರ ಭೂಮಿಯಾದ ತುಮಕೂರಿನಲ್ಲಿ ತಮ್ಮ ಸುದೀರ್ಘ ವೃತ್ತಿಜೀವನದ ಕೊನೆಯ ಹಂತದ ಸೇವೆಯನ್ನು ಪೂರೈಸಿ ನಿವೃತ್ತಿಯಾಗುತ್ತಿರುವುದು ಅತ್ಯಂತ ಸಂತೋಷ ಮತ್ತು ತೃಪ್ತಿ ತಂದಿದೆ ಎಂದು ಅವರು ಹೇಳಿದರು.

ಹಿರಿಯ ವಾಹನ ನಿರೀಕ್ಷಕ ಎಸ್. ಷರೀಫ್ ಅವರು ಮಾತನಾಡಿ ಎ. ವಿ. ಪ್ರಸಾದ್ ಅವರು ಎರಡು ವರ್ಷಗಳ ತಮ್ಮ ಸೇವಾವಧಿಯಲ್ಲಿ ಇಲಾಖೆ ಹಾಗೂ ಸಿಬ್ಬಂದಿಯಲ್ಲಿ ಹಲವು ಸಕಾರಾತ್ಮಕ ಬದಲಾವಣೆಗಳನ್ನು ತಂದಿದ್ದಾರೆ. ಅಧಿಕಾರಿಗಳು ತಾತ್ಕಾಲಿಕವಾಗಿ ಬಂದು ಹೋಗುತ್ತಾರೆ, ಆದರೆ ಈ ಕಚೇರಿ ಮತ್ತು ಇಲಾಖೆಯ ಏಳಿಗೆಯ ಹೊಣೆ ಸಿಬ್ಬಂದಿಯ ಮೇಲಿರುತ್ತದೆ. ಇದನ್ನು ತಮ್ಮ ಸ್ವಂತ ಕಚೇರಿ ಎಂದು ಭಾವಿಸಿ ಮುನ್ನಡೆಸಬೇಕು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಲ್ಲರೂ ಒಟ್ಟಾಗಿ ಕಷ್ಟ-ಸುಖಗಳನ್ನು ಹಂಚಿಕೊಂಡು ಕೆಲಸ ಮಾಡಿದ್ದೇವೆ. ಇವತ್ತು ಪ್ರಸಾದ್ ಅವರ ಕರ್ತವ್ಯದ ಕೊನೆಯ ದಿನವಾಗಿದ್ದರೂ, ಅವರು ಮಾಡಿ ಹೋಗಿರುವ ಕೆಲಸ ಕಾರ್ಯಗಳು ಆಫೀಸ್‌ನಲ್ಲಿ ತಮ್ಮದೇ ಆದ ವಿಶೇಷ ಛಾಪನ್ನು ಮೂಡಿಸಿವೆ ಎಂದು ಬಣ್ಣಿಸಿದರು.

ರಾಜ್ಯ ವಾಹನ ಚಾಲನಾ ತರಬೇತಿ ಶಾಲೆಗಳ ಗೌರವಾಧ್ಯಕ್ಷರಾದ ಸದಾಶಿವಯ್ಯ ಅವರು ಮಾತನಾಡಿ ಸರಕಾರಿ ಅಧಿಕಾರಿಗಳಿಗೆ ನಿವೃತ್ತಿ ಎಂಬುದು ಸ್ವಾಭಾವಿಕ ಪ್ರಕ್ರಿಯೆ. ಎ. ವಿ. ಪ್ರಸಾದ್ ಅವರು ಕಳೆದ ಎರಡು ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ಮೂಲಕ ಉತ್ತಮ ಕೆಲಸಗಳನ್ನು ಮಾಡಿದ್ದಾರೆ ಸರಕಾರ ರೂಪಿಸುವ ಕಾನೂನುಗಳನ್ನು ಅಧಿಕಾರಿಗಳು ಜಾರಿಗೆ ತರಬೇಕಾಗುತ್ತದೆ. ಕಟ್ಟುನಿಟ್ಟಾಗಿ ಕಾನೂನು ಜಾರಿಗೊಳಿಸುವಾಗ ಸಾರ್ವಜನಿಕರಿಂದ ಆರಂಭದಲ್ಲಿ ವಿರೋಧ ವ್ಯಕ್ತವಾಗುವುದು ಸಾಮಾನ್ಯ, ಆದರೆ ಅಂತಿಮವಾಗಿ ಅದು ಸಮಾಜದ ಒಳಿತಿಗೇ ಕಾರಣವಾಗುತ್ತದೆ. ಪ್ರಸಾದ್ ಅವರು ಜನಹಿತವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಅಧಿಕಾರವನ್ನು ಸರಿಯಾಗಿ ಚಲಾಯಿಸಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ

ಜಂಟಿ ಸಾರಿಗೆ ಆಯುಕ್ತರಾದ ಗಾಯಿತ್ರಿ ದೇವಿ ಅವರು ತುಮಕೂರು ಜಿಲ್ಲೆಯ ಹೆಣ್ಣುಮಗಳಾಗಿದ್ದು, ತಮ್ಮ ಜಿಲ್ಲೆಗೆ ಏನಾದರೂ ಒಳ್ಳೆಯದು ಮಾಡಬೇಕೆಂಬ ಸದುದ್ದೇಶದಿಂದ ಶ್ರಮಿಸುತ್ತಿದ್ದಾರೆ. ಈ ಕೆಲಸಕ್ಕೆ ಎ. ವಿ. ಪ್ರಸಾದ್ ಅವರು ಉತ್ತಮ ಸಾಥ್ ನೀಡಿದ್ದರು,

ನೂತನವಾಗಿ ಬಂದಿರುವ ಹೇಮಾವತಿ ಮೇಡಂ ಅವರೂ ಸಹ ತುಮಕೂರು ಜಿಲ್ಲೆಯವರೇ ಆಗಿರುವುದರಿಂದ, ಇಲಾಖೆಯ ಅಧಿಕಾರಿಗಳು ಇದೇ ರೀತಿ ಸಹಕಾರ ನೀಡಿ ತುಮಕೂರು ಜಿಲ್ಲೆಯ ಜನತೆಗೆ ಒಳ್ಳೆಯದನ್ನು ತಲುಪಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ವಾಹನ ಚಾಲನಾ ತರಬೇತಿ ಶಾಲೆಗಳ ಅಧ್ಯಕ್ಷ ಶಿವಕುಮಾರ್, ಹೊಸ ಆರ್‌ಟಿಓ ಅಧಿಕಾರಿ ಹೇಮಾವತಿ, ನರಸಿಂಹಮೂರ್ತಿ, ದಿನೇಶ್, ಜಯರಾಮು ,ನಾರಾಯಣಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

ಶಿಕ್ಷಣ ಜಗತ್ತಿನ ಬೆಳಕು



ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ಶಿಕ್ಷಣ ಜಗತ್ತಿನ ಬೆಳಕು. ಎಲ್ಲರೂ ಪ್ರೀತಿ, ವಿಶ್ವಾಸ, ನಂಬಿಕೆ,ಮತ್ತು ಗೌರವದಿಂದ ಬಾಳಿ ಬದುಕ ಬೇಕು ಎಂದು ನಿವೃತ್ತ ಪ್ರಾಚಾರ್ಯ ಪ್ರೊ.ಸಿ.ಕೃಷ್ಣಪ್ಪ ಅಭಿಪ್ರಾಯ ಪಟ್ಟರು ಪಟ್ಟಣದ ಟಿ.ವಿ.ವಿ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಈ ಸಾಲಿನ ಕಿರಿಯ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿದ ಅವರು ಏಕಾಗ್ರತೆ,.ಪರಿಶ್ರಮದಿಂದ ವಿದ್ಯೆ ಲಭಿಸುತ್ತದೆ. ವಿನಯ,ವಿವೇಕ ಜ್ಞಾನದ ಕಳಶ ಎಂದರು.

ಮುಖ್ಯ ಅತಿಥಿಯಾಗಿದ್ದ ಸಾಹಿತಿ ಮ.ಲ.ನ.ಮೂರ್ತಿ ಮಾತನಾಡಿ, ಅಂತಃಕರಣವಿರದ ಅಕ್ಷರ ಜ್ಞಾನ ಅಪಾಯಕಾ undefinedj. ಬಹುತ್ವ ಸೋದರಭಾವ,ದೇಶದ ,ಭವ್ಯತೆ, ಭದ್ರತೆಯ ಬುನಾದಿ..ಕಲಿತ ವಿದ್ಯೆಗೆ ನಡೆನುಡಿ ನೋಟವೇ ಉಜ್ಜುಗಲ್ಲು ಒಳ್ಳೆಯವರಾಗಿ ಒಳಿತು ಮಾಡಿ ಎಂದರು.

ದೈಹಿಕ ಶಿಕ್ಷಣ ನಿರ್ದೇಶಕ, ಎಂ, ಆರ್.ಟವೆಂಕಟೇಶ್ ಮೂರ್ತಿ ಕ್ರೀಡೆ ಸಾಂಸ್ಕೃತಿಕ ಸ್ಪರ್ಧಾವಿಜೇತರಿಗೆ ಬಹುಮಾನ ವಿತರಿಸಿದರು,ಉಪನ್ಯಾಸಕರಾದ ದಾಸಪ್ಪ ಮಾತನಾಡಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಪ್ರತಿಭೆ ಅನಾವರಣ ಮಾಡುವ ಮೂಲಕ ದೇಶದ ಸಂಪತ್ತಾಗಲಿ ಎಂದರು.

ಪ್ರಾಚಾರ್ಯ ಹನುಮಂತರಾಯಪ್ಪ ಮಾತನಾಡಿದ, ವಿದ್ಯಾರ್ಥಿಗಳು ಜನ್ಮನೀಡಿದವರಿಗೆ, ಪಾಠ ಹೇಳಿವರಿಗೆ ಗೌರವನೀಡಿ ,ಉತ್ತಮ ಫಲಿತಾಂಶ ತನ್ನಿ ಎಂದರು. ಮುಂಜುಪ್ರಸಾದ್. ಪ್ರಾಸ್ತಾವಿಕ ಮಾತನಾಡಿ, ಆಲಿಸಿ,ಓದಿ,ಬರೆದು. ಜಾಣರಾಗಿ. ರೆಂದರು . ಮಹಾಲಕ್ಷ್ಮಿಸಂಗಡಿಗರು ಪ್ರಾರ್ಥಿಸಿದರ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.